**ವಿಷಯ ಸಂಕೇತ - 01 K**

**2024-25ನೇ ಸಾಲಿನ ಎಸ್ ಎಸ್ ಎಲ್ ಸಿ ಸಂಕಲನಾತ್ಮಕ ಮೌಲ್ಯಮಾಪನ - 1**

**ಪ್ರಥಮ ಭಾಷೆ ಕನ್ನಡ**

**ಸಮಯ : ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.15ರವರೆಗೆ** **ಗರಿಷ್ಠ ಅಂಕಗಳು : 100**

**ಮಾದರಿ ಉತ್ತರ :**

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. 6 x 1 = 6

1. ಉನ್ಮಾದ ಪದವು ಈ ಸಂಧಿಗೆ ಉದಾಹರಣೆಯಾಗಿದೆ

ಎ) ಆದೇಶಸಂಧಿ ಬಿ) ಲೋಪಸಂಧಿ ಸಿ) ಅನುನಾಸಿಕ ಸಂಧಿ ಡಿ) ಜಶ್ತ್ವ ಸಂಧಿ

**ಸರಿ ಉತ್ತರ : ಸಿ) ಅನುನಾಸಿಕ ಸಂಧಿ**

2. ಸಾಮಾನ್ಯಾರ್ಥಕಾವ್ಯಯಕ್ಕೆ ಉದಾಹರಣೆಯಾದ ಪದವಿದು

ಎ) ಧಗಧಗ ಬಿ) ಸುಮ್ಮನೆ ಸಿ) ಉಂಟು ಡಿ) ಅಥವಾ

**ಸರಿ ಉತ್ತರ : ಬಿ) ಸುಮ್ಮನೆ**

3. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಈ ಚಿಹ್ನೆಯನ್ನು ಬಳಸಲಾಗುವುದು

ಎ) ವಾಕ್ಯವೇಷ್ಠನ ಬಿ) ಉದ್ಧರಣ ಸಿ) ಆವರಣ ಡಿ) ವಿವರಣಾತ್ಮಕ

**ಸರಿ ಉತ್ತರ : ಬಿ) ಉದ್ಧರಣ**

4. 'ಕೈಯಾನು ಪದವು ಈ ಸಮಾಸಕ್ಕೆ ಸೇರಿದೆ

ಎ) ಕ್ರಿಯಾ ಸಮಾಸ ಬಿ) ತತ್ಪುರುಷ ಸಮಾಸ ಸಿ) ಅಂಶಿ ಸಮಾಸ ಡಿ) ದ್ವಿಗು ಸಮಾಸ

**ಸರಿ ಉತ್ತರ : ಎ) ಕ್ರಿಯಾ ಸಮಾಸ**

5. ಸಂಭವನಾರ್ಥಕ ಕ್ರಿಯಾಪದಕ್ಕೆ ಉದಾಹರಣೆಯಾದ ಪದವಿದು

ಎ) ಮಾಡಲಿ ಬಿ) ಮಾಡನು ಸಿ) ಮಾಡಿದನು ಡಿ) ಮಾಡಿಯಾನು

**ಸರಿ ಉತ್ತರ : ಡಿ) ಮಾಡಿಯಾನು**

6. ಸಂಪ್ರದಾನ ಕಾರಕಾರ್ಥವು ಈ ವಿಭಕ್ತಿಯದ್ದಾಗಿದೆ

ಎ) ಸಪ್ತಮೀ ಬಿ) ಪಂಚಮೀ ಸಿ) ಚತುರ್ಥೀ ಡಿ) ತೃತೀಯಾ

**ಸರಿ ಉತ್ತರ : ಸಿ) ಚತುರ್ಥೀ**

II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ. 4X1=4

7. ಪಾದುಕಾ : ಹಾವುಗೆ : : ವೈಶಾಖ : ______________ ( ಬೇಸಿಗೆ )

8. ತುತ್ತತುದಿ : ದ್ವಿರುಕ್ತಿ : : ಸತಿಪತಿ : ____________ ( ಜೋಡುನುಡಿ )

9. ಸಹದೇವ : ಅಂಕಿತನಾಮ : : ಪರ್ವತ : ____________( ರೂಢನಾಮ )

10. ಅವರ್ಗೀಯ ವ್ಯಂಜನಗಳು : ೯ : : ಅನುನಾಸಿಕಗಳು : _________ ( 5)

III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 7X1=7

11. ಭಾಷೆ ಯಾವುದಕ್ಕೆ ಸಾಧನವಾಗಿದೆ?

ಉತ್ತರ : ನಮ್ಮ ಸುತ್ತಮುತ್ತಲಿನವರೊಡನೆ ವ್ಯವಹರಿಸುವುದಕ್ಕೆ ಹಾಗೂ ವಿಚಾರ ವಿನಿಮಯ ಮಾಡುವುದಕ್ಕೆ ಭಾಷೆ ಒಂದು ಅಮೂಲ್ಯ ಸಾಧನವಾಗಿದೆ.

12. ಶಾನುಭೋಗರಿಗೆ ತಲೆ ಸುತ್ತಲು ಕಾರಣವೇನು?

ಉತ್ತರ : ಹುಲಿಯ ವೇಗಕ್ಕೆ ಸರಿಯಾಗಿ ಚಾಚೂ ತಪ್ಪದಂತೆ ತಮ್ಮವೇಗವನ್ನೂ ಹೊಂದಿಸಿಕೊಂಡು ಕುಲಾಲಚಕ್ರದಂತೆ ತಿರುಗುತ್ತಿದ್ದರಿಂದ ಶಾನುಭೋಗರಿಗೆ ತಲೆಸುತ್ತಲಾರಂಭಿಸಿತು.

13. ವಿಶ್ವೇಶ್ವರಯ್ಯ ಅವರ ಹುಟ್ಟುಹಬ್ಬದ ನೆನಪಿಗಾಗಿ ಯಾವ ದಿನಾಚರಣೆಯನ್ನು ಮಾಡಲಾಗುತ್ತಿದೆ?

ಉತ್ತರ : ವಿಶ್ವೇಶ್ವರಯ್ಯ ಅವರ ಹುಟ್ಟು ಹಬ್ಬದ ನೆನಪಿಗಾಗಿ ಇಂಜಿನಿಯರ್ಸ್ ದಿನಾಚರಣೆಯನ್ನು ಮಾಡಲಾಗುತ್ತಿದೆ.

14. 'ಶಿವಾನುಭವ ಶಬ್ದಕೋಶ' ಪುಸ್ತಕ ಬರೆದವರು ಯಾರು?

ಉತ್ತರ : 'ಶಿವಾನುಭವ ಶಬ್ದಕೋಶ' ಪುಸ್ತಕ ಬರೆದವರು ಹಳಕಟ್ಟಿಯವರು.

15. ಹಕ್ಕಿಯ ಕಣ್ಣುಗಳು ಯಾವುವು?

ಉತ್ತರ :- ಹಕ್ಕಿಯ ಕಣ್ಣುಗಳು ಸೂರ್ಯಚಂದ್ರರು.

16. ಹಕ್ಕಿ ಯಾರನ್ನು ಹರಸಿದೆ ?

ಉತ್ತರ :- ಹಕ್ಕಿ ಹೊಸಗಾಲದ ಹಸುಮಕ್ಕಳನ್ನು ಹರಸಿದೆ.

17. ಒಡೆಯನ ಮನೆಯ ಅಂಗಳದಲ್ಲಿ ಮಾವಿನ ಮರಗಳು ಹೇಗೆ ನಿಂತಿವೆ?

ಉತ್ತರ : ಒಡೆಯನ ಮನೆಯ ಅಂಗಳದಲ್ಲಿ ಮಾವಿನ ಮರಗಳು ಮೈತುಂಬಿ ನಿಂತಿವೆ.

IV. ಕೆಳಗಿನ ಪ್ರಶ್ನೆಗಳಿಗೆ ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 10X2=20

18. ವ್ಯಾವಹಾರಿಕ ಮತ್ತು ಗ್ರಾಂಥಿಕ ಭಾಷೆಯ ಲಕ್ಷಣಗಳೇನು?

ಉತ್ತರ : ಭಾಷೆಗಳನ್ನು ವ್ಯಾವಹಾರಿಕ ಮತ್ತು ಗ್ರಾಂಥಿಕ ಎಂದು ಎರಡು ತೆರನಾಗಿ ವಿಭಾಗಿಸುವುದುಂಟು. ವ್ಯಾವಹಾರಿಕವೆಂದರೆ ಜೀವದ್ಭಾಷೆ, ಅದರಲ್ಲಿ ಜನರು ಮಾತನಾಡುತ್ತಾರೆ, ವ್ಯವಹರಿಸುತ್ತಾರೆ, ಕನ್ನಡ, ತಮಿಳು, ತೆಲುಗು, ತುಳು, ಮರಾಠಿ, ಉರ್ದು, ಇಂಗ್ಲಿಷ್ ಇದ್ದು ಇದಕ್ಕೆ ಉದಾಹರಣೆ: ಗ್ರಾಂಥಿಕವೆಂದರೆ ಅಭಿವೃದ್ಧಿ ಹೊಂದಿ ಗ್ರಂಥ ರಚನೆಯಲ್ಲಿ ಉಪಯೋಗವಾದ ಭಾಷೆ, ಸಂಸ್ಕೃತ, ಕನ್ನಡ, ಇಂಗ್ಲಿಷ್, ಪಾಳಿ, ಇತ್ಯಾದಿ ಈ ವರ್ಗಕ್ಕೆ ಉದಾಹರಣೆ.

19. ಕನ್ನಡ ಭಾಷೆ ಹದಗೊಂಡದ್ದು ಹೇಗೆ?

ಉತ್ತರ : ಅನೇಕ ಕವಿಗಳು ಕನ್ನಡ ಅಭಿವೃದ್ಧಿ ಹೊಂದಬೇಕಾದರೆ ಕನ್ನಡ ಪದಗಳ ಬಳಕೆ ಹೆಚ್ಚಾಗಬೇಕೆಂದು ಸಾರಿದ್ದಾರೆ. ಅಂಥವರ ವಾಣಿಯಿಂದ ಕನ್ನಡದ ವೀಣೆ ಮೃದು ಮಧುರವಾಗಿ ಮಿಡಿಯಿತು. ಮುಂದೆ ಬಸವೇಶ್ವರ, ಅಲ್ಲಮಪ್ರಭುಗಳಂತಹ ಶರಣವರೇಣ್ಯರು, ಚಾಮರಸ, ಕುಮಾರವ್ಯಾಸರಂತಹ ಕವಿಪುಂಗವರು, ಪುರಂದರದಾಸ, ಕನಕದಾಸರಂತಹ ದಾಸ ಶ್ರೇಷ್ಠರು ಸುಲಭ

ಮಾರ್ಗವನ್ನೇ ತುಳಿದರು. ತಮ್ಮ ತಮ್ಮ ಅನುಭವಸಾರವನ್ನು ಸುಲಭವೂ ಸುಂದರವೂ ಸಹಜವೂ ಆದ ಮಾತುಗಳಿಂದ ಹೃದಯ ಮುಟ್ಟುವಂತೆ ಅಭಿವ್ಯಕ್ತಪಡಿಸಿದರು. ಹೀಗೆ ಕನ್ನಡ ಭಾಷೆ ಹದಗೊಂಡಿತು.

20. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ವಿವರಿಸಿ.

ಉತ್ತರ :- ಶಾನುಭೋಗರು ಮೂರ್ಛೆಯಲ್ಲಿದ್ದಾಗ, ಚಿಕ್ಕನಾಯಕನಹಳ್ಳಿಗೆ ತೆಂಗಿನಕಾಯಿ ತುಂಬಿಕೊಂಡು ಹೋಗಿದ್ದ ಕೆಲವು ರೈತರು ತಿಂಗಳ ಬೆಳಕಿನಲ್ಲಿ ಗಾಡಿ ಹೊಡೆದುಕೊಂಡು ತಮ್ಮ ಹಳ್ಳಿಗೆ ಹಿಂದಿರುಗುತ್ತಿದ್ದರು. ಶಾನುಭೋಗರು ಬಿದ್ದ ಸ್ಥಳಕ್ಕೆ ಕಾಲು ಹರಿದಾರಿಯಿದೆ ಎನ್ನುವಾಗ ಎತ್ತುಗಳು ಏನು ಮಾಡಿದರೂ ಮುಂದೆ ಹೋಗದೆ ಕಣಿ ಹಾಕಿಕೊಂಡವು. ಅದೇ ವೇಳೆಗೆ ಎದೆ ನಡುಗುವಂತೆ ಹುಲಿಯ ಗರ್ಜನೆ ಕೇಳಿಸಿತು. ಎತ್ತುಗಳ ಘಂಟೆಯ ಶಬ್ದವನ್ನು ಕೇಳಿದ ಹುಲಿ ಕೆಲವು ನಿಮಿಷ ತಡೆದು ನೋಡಿತು. ಆದರೆ ರೈತರ ಮಾತು ಕೇಳಿಬಂದ ಮೇಲೆ ನಿರಾಶೆಯಿಂದಲೂ ಕೋಪದಿಂದಲೂ ಗರ್ಜಿಸಿ ಪಲಾಯನ ಮಾಡಿತು. ಗಾಡಿಯವರು ಸ್ವಲ್ಪ ಹೊತ್ತು ಗಾಡಿಯ ಬಳಿಯಲ್ಲೇ ನಿಂತು ನೋಡಿದರು. ಮತ್ತೆ ಗರ್ಜನೆ ಕೇಳಲಿಲ್ಲ. ಅನಂತರ ಅವರು ತಮ್ಮಲ್ಲಿದ್ದ ಕೋವಿಯಿಂದ ಒಂದೆರಡು ತೋಟಾ ಹಾರಿಸಿ, ಕೈಲಾದಷ್ಟು ಗಲಭೆ ಮಾಡುತ್ತಾ ತೆಂಗಿನಗರಿಯ ಪಂಜು ಹೊತ್ತಿಸಿಕೊಂಡು ಜಾಗರೂಕತೆಯಿಂದ ಮುಂದುವರಿದರು. ಮೂರ್ಛೆಯಲ್ಲಿ ಬಿದ್ದಿದ್ದ ಶಾನುಭೋಗರನ್ನು ಕಂಡು ಮುಖದ ಮೇಲೆ ನೀರೆರಚಿ ಎಚ್ಚರಿಸಿದರು.

21. ಅಶೋಕ ಪೈ ಹೇಳಿದ ಸಂಶೋಧನಾ ಸತ್ಯವೇನು?

ಉತ್ತರ : ಖ್ಯಾತ ಮನೋವೈದ್ಯರಾದ ಅಶೋಕ ಪೈ ಅವರು ಹೇಳಿದ ಸಂಶೋಧನಾ ಸತ್ಯ ಏನೆಂದರೆ ,ಕೆಲವು ಜನ ಒಂದು ಕೊಠಡಿಯಲ್ಲಿ ಕುಳಿತು ಟೆಲಿವಿಷನ್ ನೋಡುತ್ತಿದ್ದಾರೆ. ಇನ್ನೊಂದಿಷ್ಟು ಜನ ಪಕ್ಕದ ಕೊಠಡಿಯಲ್ಲಿ ಏನೋ ಮಾತುಕತೆಯಾಡುತ್ತ ತಮ್ಮಷ್ಟಕ್ಕೆ ತಾವಿರುವರು. ಆಗ ಟೆಲಿವಿಷನ್‌ನಲ್ಲಿ ಯಾವುದಾದರೂ ಕೊಲೆ ದೃಶ್ಯ ಬಂದಾಗ ಅದರ ದು:ಖದ ಭಾವನೆಯು ಇದನ್ನು ನೋಡದೆ ಇರುವ ಪಕ್ಕದ ಕೊಠಡಿಯಲ್ಲಿ ಇರುವವರ ಮನಸ್ಸಿನ ಮೇಲೆ ಪರಿಣಾಮ ಬೀರಿ ಅವರ ಸ್ವಲ್ಪಮಟ್ಟಿಗೆ ದುಗುಡಗೊಳ್ಳುತ್ತದಂತೆ. ಅದೇ ನೃತ್ಯ ದೃಶ್ಯ ಬಂದಾಗ ಅದನ್ನು ನೋಡುತ್ತಿದ್ದವರ ಖುಷಿ ಭಾವನೆಯು ಪಕ್ಕದ ಕೊಠಡಿಯಲ್ಲಿ ಇದ್ದವರ ಮನಸ್ಸಿನ ಮೇಲೂ ಪರಿಣಾಮ ಮಾಡಿ ಸಂತೋಷದ ಭಾವನೆ ಉಂಟಾಗುವುದಂತೆ. ಇದು ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ, ಯಾವುದೇ ಒಂದು ಜೀವಿಗೆ ಆಗುವ ದುಃಖ ದುಮ್ಮಾನ ಪರಿಸರದಲ್ಲಿ ಉಸಿರಾಡುತ್ತ ಎಲ್ಲಾ ಜೀವಿಗಳಲ್ಲೂ ಕಂಪನ ಉಂಟು ಮಾಡುತ್ತಿರುತ್ತದೇನೊ. ಈ ಅನುಕಂಪನ ಇಡೀ ಜೀವಸಂಕುಲವನ್ನೇ ಒಂದು ಎಂದು ಹೇಳುತ್ತದೆ.

22. ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ ಸೇತುವೆಯಾಗಬೇಕಿದೆ ?

ಉತ್ತರ :- ಮನುಷ್ಯರ ನಡುವೆ ಇರುವ ಸಾಮರಸ್ಯ ಸ್ನೇಹವು ಜಾತಿ, ಧರ್ಮ, ಭಾಷೆ ಮುಂತಾದ ಭಿನ್ನಾಭಿಪ್ರಾಯಗಳಿಂದ ಬಿದ್ದು ಹೋಗಿದೆ. ಹಾಗಾಗಿ ಈ ಭಿನ್ನಾಭಿಪ್ರಾಯಗಳ ಅಡ್ಡ ಗೋಡೆಯನ್ನು ಕೆಡವಿ ಹೊಸ ಭರವಸೆಯ ಮೂಲಕ ಮನುಷ್ಯರ ನಡುವೆ ಸೇತುವೆಯಾಗಬೇಕು.

23. ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ ?

ಉತ್ತರ :- ಕಾಲವೆಂಬ ಹಕ್ಕಿಯು ನೀಲಿಯಾದ ಮೋಡಗಳ ಮಂಡಲಕ್ಕೆ ಸಮನಾದ ಬಣ್ಣವನ್ನು ಹೊಂದಿದೆ. ಈ ಹಕ್ಕಿ ಹಾರುವಾಗ ಮುಗಿಲಿಗೇ ರೆಕ್ಕೆಗಳು ಹುಟ್ಟಿಕೊಂಡ ಹಾಗೆ ಕಾಣುತ್ತಿದೆ. ನಕ್ಷತ್ರಗಳನ್ನು ಮಾಲೆಯಂತೆ ತನ್ನ ಕೊರಳಿಗೆ ಸಿಕ್ಕಿಸಿಕೊಂಡು, ಸೂರ್ಯಚಂದ್ರರನ್ನು ತನ್ನ ಕಣ್ಣುಗಳನ್ನಾಗಿ ಮಾಡಿಕೊಂಡು ಕಾಲವೆಂಬ ಹಕ್ಕಿ ಹಾರಿಹೋಗುತ್ತಿದೆ ಎಂದು ಹಕ್ಕಿಯ ಹಾರಾಟವನ್ನು ಕವಿ ದ.ರಾ.ಬೇಂದ್ರೆ ಅವರು ಆಕಾಶಕ್ಕೆಹೋಲಿಸಿದ್ದಾರೆ.

24. ಭಗತ್ ಸಿಂಗ್ ಜಲಿಯನ್ ವಾಲಾಬಾಗ್ ಮಣ್ಣಿನ ಕುರಿತು ತನ್ನ ತಂಗಿಗೆ ಏನೆಂದು ಹೇಳುತ್ತಾನೆ ?

ಉತ್ತರ : ಭಗತ್‌ಸಿಂಗ್, ಜಲಿಯನ್ ವಾಲಾಬಾಗ್‌ನ ಮಣ್ಣಿನ ಕುರಿತು ತನ್ನ ತಂಗಿಗೆ "ಇದು ಬಹಳ ಪೂಜ್ಯನೀಯವಾದ ಮಣ್ಣು, ಜಲಿಯನ್ ವಾಲಾಬಾಗ್ ಹತ್ಯಾಕಾಂಡದಲ್ಲಿ ಹುತಾತ್ಮರಾದವರ ರಕ್ತದಿಂದ ಈ ಮಣ್ಣು ಒದ್ದೆಯಾಗಿದೆ" ಎಂದು ಹೇಳುತ್ತಾನೆ.

25. ಭಗತ್ ಸಿಂಗ್ ಜಲಿಯನ್ ವಾಲಾಬಾಗ್ ಮಾರಣ ಹೋಮದಿಂದ ತೆಗೆದುಕೊಂಡ ನಿರ್ಧಾರವೇನು?

ಉತ್ತರವ : ಒಂದಲ್ಲ ಒಂದು ದಿನ ಈ ದಮನಕಾರಿ ಪ್ರಭುತ್ವವನ್ನು ಧ್ವಂಸ ಮಾಡಲು ಏನನ್ನಾದರೂ ಮಾಡಿಯೇ ತೀರುತ್ತೇನೆಂದೂ, ಆಗ ಕ್ರೂರ ಬ್ರಿಟೀಷ್ ಆಳ್ವಿಕೆ ಅಂತ್ಯವಾಗುತ್ತದೆ ಎಂಬ ನಿರ್ಧಾರ ತೆಗೆದುಕೊಂಡಿದ್ದ.

26. 'ಅನ್ ಟು ದಿಸ್ ಲಾಸ್ಟ್' ಕೃತಿ ಗಾಂಧೀಜಿಯವರ ಮೇಲೆ ಯಾವ ಪರಿಣಾಮ ಬೀರಿತು?

ಉತ್ತರ : ರಸ್ಕಿನ್‌ನ "ಅನ್‌ಟು ದಿಸ್ ಲಾಸ್ಟ್" ಎಂಬ ಪುಸ್ತಕವನ್ನು ಓದಲು ಪ್ರಾರಂಭಿಸಿದುದೇ ತಡ, ಅದನ್ನು ಕೆಳಗಿಳಿಸಲು ಗಾಂಧೀಜಿಯವರಿಗೆ ಸಾಧ್ಯವಾಗಲಿಲ್ಲ. ಅದು ಅವರ ಮನಸ್ಸನ್ನು ಸೆರೆಹಿಡಿಯಿತು. ಆ ಪುಸ್ತಕದಲ್ಲಿ ಹೇಳಿದ್ದ ಧ್ಯೇಯಗಳಿಗೆ ಅನುಸಾರವಾಗಿ ತಮ್ಮ ಜೀವನವನ್ನು ಬದಲಾಯಿಸಿಕೊಳ್ಳಬೇಕೆಂದು ಗಾಂಧೀಜಿ ನಿರ್ಣಯಿಸಿಕೊಂಡರು.

27. ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ಯಾವಾಗ ?

ಉತ್ತರ : ದೇಶದ ಭಾಷೆಯಲ್ಲಿ ಜನರಿಗೆ ಭಾವನೆಗಳನ್ನು ನೀಡಬೇಕು. ಅವರು ವಿಷಯಗ್ರಹಣ ಮಾಡಿಕೊಳ್ಳುವರು. ಆದರೆ ಅವರಿಗೆ ಮತ್ತೊಂದು ಆವಶ್ಯಕತೆ ಇದೆ. ಅದು ಸಂಸ್ಕೃತಿ. ಇದನ್ನು ಅವರಿಗೆ ಕೊಟ್ಟಾಗ ದೇಶದ ಪ್ರಗತಿ ಸ್ಥಿರವಾಗುವುದು.

V.ಕೆಳಗಿನ ಕವಿ / ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2X3=6

28. ಡಿ ಎಸ್ ಜಯಪ್ಪಗೌಡ

ಡಿ. ಎಸ್. ಜಯಪ್ಪಗೌಡ ಅವರು ೧೯೪೭ರಲ್ಲಿ ಜನಿಸಿದರು. ಇವರು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ದಾರದಹಳ್ಳಿಯವರು. ದಾರದಹಳ್ಳಿ ಸುಬ್ಬೇಗೌಡ ಜಯಪ್ಪಗೌಡ ಎಂಬುದು ಇವರ ಪೂರ್ಣ ಹೆಸರು. ಇತಿಹಾಸ ಮತ್ತು ಭಾಷಾಂತರ ವಿಷಯದಲ್ಲಿ ಮಹತ್ವದ ಕೃತಿಗಳನ್ನು ರಚಿಸಿರುವ ಇವರು ಮೈಸೂರು ವಿಶ್ವವಿದ್ಯಾನಿಲಯದ ಭಾಷಾಂತರ ಮತ್ತು ಪಠ್ಯಪುಸ್ತಕ ವಿಭಾಗದಲ್ಲಿ ಸೇವೆ ಸಲ್ಲಿಸಿದ್ದಾರೆ.

ಕರ್ನಾಟಕ ಗ್ರಾಮೀಣ ಸಂಸ್ಥೆಗಳು. ಕರ್ನಾಟಕದ ಕಡಲಾಚೆಯ ಸಂಪರ್ಕಗಳು. ಮೈಸೂರುಒಡೆಯರು. ಜನಪದ ಆಟಗಳು, ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು ಶ್ರೀಯುತರ ಪ್ರಮುಖ ಕೃತಿಗಳು. ಕರ್ನಾಟಕದ ಕಡಲಾಚೆಯ ಸಂಪರ್ಕಗಳು ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.ಧಾರವಾಡ ಕರ್ನಾಟಕ ಸಂಘದ ಸಂಶೋಧನಾ ಬಹುಮಾನಕ್ಕೆ ಭಾಜನರಾಗಿದ್ದಾರೆ.

29. ರನ್ನ

ರನ್ನ ಸಾ. ಶ. ಸುಮಾರು ೯೪೯ ರಲ್ಲಿ (ಹತ್ತನೆಯ ಶತಮಾನದಲ್ಲಿ) ಬಾಗಲಕೋಟೆ ಜಿಲ್ಲೆಯ ಮುದುವೊಳಲು. (ಈಗಿನ ಮುಧೋಳ) ಎಂಬ ಗ್ರಾಮದಲ್ಲಿ ಜನಿಸಿದನು. ಇವನ ತಂದೆ ಜಿನವಲ್ಲಭ, ತಾಯಿ ಅಬ್ಬಲಬ್ಬೆ.ಈತನು ಚಾಲುಕ್ಯ ದೊರೆಯಾದ ತೈಲಪನು ಆಸ್ಥಾನದಲ್ಲಿದ್ದನು.

ಇವನು ‘ಸಾಹಸ ಭೀಮ ವಿಜಯಂ(ಗದಾಯುದ್ಧ)’, ‘ಅಜಿತ ತೀರ್ಥಂಕರ ಪುರಾಣತಿಲಕಂ’, ‘ಪರಶುರಾಮ ಚರಿತಂ’, ‘ಚಕ್ರೇಶ್ವರ ಚರಿತಂ’ ಎಂಬ ಕಾವ್ಯಗಳನ್ನು ಬರೆದಿದ್ದಾನೆ. ‘ರನ್ನಕಂದ’ ಎಂಬ ನಿಘಂಟನ್ನು ಬರೆದಿರುವುದಾಗಿ ತಿಳಿದುಬರುತ್ತದೆ. ಇವನಿಗೆ ತೈಲಪನು ‘ಕವಿಚಕ್ರವರ್ತಿ’ ಎಂಬ ಬಿರುದನ್ನು ಕೊಟ್ಟನು. ಈತನು ಕನ್ನಡದ ರತ್ನತ್ರಯರಲ್ಲಿ ಒಬ್ಬನು.

VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1X3=3

30. _ U U U UU U _ U U

ಭಾವಿಸಿ | ದ ಜನಪ | ದಂ ವಸು = 12 ಮಾತ್ರೆ

_ U U U U _ U U UU U UU U _ _

ಧಾವಲ| ಯವಿಲೀ |ನ ವಿಶದ |ವಿಷಯ ವಿ|ಶೇಷಂ = 20 ಮಾತ್ರೆ **ಛಂದಸ್ಸು : ಇದು ಕಂದಪದ್ಯವಾಗಿದೆ**

VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿರಿ. 1X3=3

31. “ಅಳ್ಳಿರಿಯುತಿಪ್ಪ ಎಮ್ಮ ಒಡಲಬೇಗೆಯ ಬೆಂಕಿಯುರಿ ನಿನ್ನನಿರಿಯದೆ ಪೇಳು ವಿಶ್ವಾಮಿತ್ರ.”

ಅಲಂಕಾರ : ರೂಪಕಾಲಂಕಾರ

ಲಕ್ಷಣ : ಅತಿ ಸಾಮ್ಯದಿಂದಾಗಿ ಉಪಮೇಯ ಉಪಮಾನಗಳಲ್ಲಿ ಅಭೇದವನ್ನು ಹೇಳಿ ವರ್ಣಿಸಿದಾಗ ಅದು ‘ರೂಪಕಾಲಂಕಾರ’ ವಾಗುತ್ತದೆ.

ಉಪಮೇಯ - ಒಡಲಬೇಗೆ

ಉಪಮಾನ - ಬೆಂಕಿಯುರಿ

ಸಮನ್ವಯ - ಉಪಮೇಯವಾದ ಅಯೋಧ್ಯೆಯ ಪ್ರಜೆಗಳ ಒಡಲ ಬೇಗೆಯನ್ನು ಉಪಮಾನವಾದ ಬೆಂಕಿಯ ಉರಿಗೆ ಅಭೇದವಾಗಿ

ರೂಪಿಸಿರುವುದರಿಂದ ಇದು ರೂಪಕಾಲಂಕಾರವಾಗಿದೆ.

VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1X3=3

32. . ಮಾತೇ ಮುತ್ತು, ಮಾತೇ ಮೃತ್ಯು.

ಗಾದೆಗಳು ಜನಪದರ ಅನುಭವದ ನುಡಿಮುತ್ತುಗಳಾಗಿವೆ. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತೇ ಇದೆ. ಅಂತಹ ಸಾವಿರಾರು ಗಾದೆ ಮಾತುಗಳನ್ನು ಕನ್ನಡ ಭಾಷೆಯಲ್ಲಿ ಕಾಣಬುದಾಗಿದೆ. ಅಂತಹ ಗಾದೆಗಳಲ್ಲಿ ಒಂದು ಮಾತೇ ಮುತ್ತು, ಮಾತೇ ಮೃತ್ಯು.

ಈ ಗಾದೆ ಮಾತಿನ ಮಹತ್ವವನ್ನು ತಿಳಿಸುತ್ತದೆ. ಮಾತು ಹೇಗೆ ಆಡಬೇಕೆಂಬ ಅರಿವು ನಮಗಿರಬೇಕು. ಆಗ ಮಾತು ಮುತ್ತಿನಂತೆ ಬೆಳೆಬಾಳುವಂತಹದ್ದಾಗುತ್ತದೆ. ಆದರೆ ನಾಲಿಗೆ ಇದೆ ಎಂದು ಹೇಗೆ ಹೇಗೋ ಆಡಿದರೆ, ಆ ಮಾತು ನಮ್ಮ ಮೃತ್ಯವಿಗೂ ಕಾರಣವಾಗಬಹುದು. ಪುರಂದರ ದಾಸರು ಅದಕ್ಕಾಗಿಯೇ ಎಲುಬಿಲ್ಲದ ನಾಲಿಗೆ ನಿ ನೀಚ ಬುದ್ಧಿಯ ಬಿಡು ನಾಲಿಗೆ ಎಂದು ಹೇಳಿರುವುದು. ‘ಮಾತು ಬಲ್ಲಾತಂಗೆ ಮಾತೊಂದು ಮಾಣಿಕವು ಮಾತು ಬಾರದಾತಂಗೆ ಮಾಣಿಕವು ತೂತು ಬಿದ್ದಂತೆ’ ಎಂಬ ಸರ್ವಜ್ಞನ ವಚನ ಮಾತಿನ ಮಹತ್ವವನ್ನು ತಿಳಿಸುತ್ತದೆ. ‘ಮಾತು ಬಲ್ಲಾತ ಮುತ್ತು ತಂದ, ಮಾತು ಬಾರದಾತ ಜಗಳ ತಂದ’ ಎಂಬ ಮಾತಿದೆ. ಯಾರಿಗೆ ಯಾವ ಸಮಯದಲ್ಲಿ ಹೇಗೆ ಮಾತನಾಡಬೇಕು ಎಂಬ ಅರಿವಿರುತ್ತದೋ ಅವರು ಜಗಳ ಬರುವ ಸನ್ನಿವೇಶವನ್ನು ಜಗಳವಾಗದಂತೆ

ನಿಭಾಯಿಸಬಲ್ಲ. ಬಸವಣ್ಣನವರ ವಚನ ಹೇಳುವಂತೆ, ನಾವು ನುಡಿದರೆ ಮುತ್ತಿನ ಹಾರದಂತಿರಬೇಕು, ನುಡಿದರೆ ಸ್ಪಟಿಕದ ಶಲಾಕೆಯಂತಿರಬೇಕು, ನುಡಿದರೆ ಲಿಂಗ ಮೆಚ್ಚಿ ಅಹುದಹುದೆನ್ನಬೇಕು.

ಈ ಗಾದೆಯನ್ನು ಸರಿಯಾಗಿ ಅರ್ಥೈಸಿಕೊಂಡು ನಾವು ಹೇಗೆ ಮಾತನಾಡಬೇಕೆಂಬುದನ್ನು ಕಲಿಯುವ ಮೂಲಕ ಸಮಾಜದಲ್ಲಿ ಉತ್ತಮ ಸ್ಥಾನ ಮಾನ ಗಳಿಸಬಹುದಾಗಿದೆ.

ಅಥವಾ

ಉಪ್ಪಿಗಿಂತ ರುಚಿಯಿಲ್ಲ, ತಾಯಿಗಿಂತ ಬಂಧುವಿಲ್ಲ.

ಗಾದೆಗಳು ಜನಪದರ ಅನುಭವದ ನುಡಿಮುತ್ತುಗಳಾಗಿವೆ. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತೇ ಇದೆ. ಅಂತಹ ಸಾವಿರಾರು ಗಾದೆ ಮಾತುಗಳನ್ನು ಕನ್ನಡ ಭಾಷೆಯಲ್ಲಿ ಕಾಣಬುದಾಗಿದೆ. ಅಂತಹ ಗಾದೆಗಳಲ್ಲಿ ಒಂದು ಉಪ್ಪಿಗಿಂತ ರುಚಿಯಿಲ್ಲ, ತಾಯಿಗಿಂತ ಬಂಧುವಿಲ್ಲ.

ಈ ಗಾದೆ ರುಚಿಗಳಲ್ಲೇ ಶ್ರೇಷ್ಠವಾದ ಉಪ್ಪಿನ ಬಗ್ಗೆ ಹಾಗೇ ಬಂಧುಗಳಲ್ಲೇ ಶ್ರೇಷ್ಠ ಸ್ಥಾನ ಪಡೆದಿರುವ ತಾಯಿಯ ಬಗ್ಗೆ ತಿಳಿಸುತ್ತದೆ. ಷಡ್ರಸಗಳಾದ ಉಪ್ಪು ಕಾರ, ಹುಳಿ, ಸಿಹಿ, ಕಹಿ, ಒಗರು ಇವುಗಳಲ್ಲಿ ಶ್ರೇಷ್ಠವಾದ ರುಚಿ ಎಂದರೆ ಅದು ಉಪ್ಪು. ಉಪ್ಪನ್ನು ಹಾಕದಿದ್ದರೆ ಯಾವುದೇ ಅಡುಗೆಯೂ ರುಚಿಯಾಗದು. ಅದೇರೀತಿಯಲ್ಲಿ ನಮ್ಮನ್ನು ಹೆತ್ತ ತಾಯಿ ನಮ್ಮ ಸನಿಹದಲ್ಲಿ ಇದ್ದರೆ ಅದು ಸ್ವರ್ಗ ಸಮಾನ. ಹಾಗಾಗಿಯೇ ಜನಪದರು 'ಯಾರು ಆದಾರೋ ಹೆತ್ತ ತಾಯಂತೆ ಆದಾರೋ, ಸಾವಿರ ಸೌದೆ ಒಲೆಯಲ್ಲಿ ಉರಿದಾರೋ ದೀವಿಗೆಯಂತ ಬೆಳಕುಂಟೆ' ಎಂದಿದ್ದಾರೆ. ಎಷ್ಟೇ ಬಂಧುಗಳಿದ್ದರೂ ನಮ್ಮ ತಾಯಿಯ ಸ್ಥಾನವನ್ನು ಯಾರಿಗೂ ತುಂಬಲು ಸಾಧ್ಯವಿಲ್ಲ.

XI. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6X3=18

33. "ಜ್ಞಾನ ಭಂಡಾರ ಭದ್ರವಾಯಿತು."

ಆಯ್ಕೆ : ಈ ವಾಕ್ಯವನ್ನು ಎಂ ಮರಿಯಪ್ಪ ಭಟ್ಟ ಅವರು ಬರೆದಿರುವ 'ಕನ್ನಡ ಸಂಸ್ಕೃತಿ' ಎಂಬ ಪ್ರಬಂಧ ಸಂಕಲನದಿಂದ ಆಯ್ದ 'ನಮ್ಮ ಭಾಷೆ' ಎಂಬ ಪಾಠದಿಂದ ಆರಿಸಲಾಗಿದೆ.

ಸಂದರ್ಭ : ಲಿಪಿಯನ್ನು ಕಂಡುಕೊಂಡ ನಂತರ, ಮುಂದೆ ಮಾನವನಿಗೆ ಬಿಡುವು ಹೆಚ್ಚಿದಂತೆ, ಜೀವನದ ಸೌಕರ್ಯಗಳನ್ನು ವಿಶಿಷ್ಟ ಮೇಧಾಶಕ್ತಿಯಿಂದ ಅಭಿವೃದ್ಧಿಗೊಳಿಸುತ್ತಾ ಹೋದಂತೆ ತನ್ನ ಆಗುಹೋಗುಗಳನ್ನು, ಸುಖ ದುಃಖಗಳನ್ನು ಕಾವ್ಯರೂಪಕ್ಕೆ ಇಳಿಸುವ ಮಾರ್ಗವನ್ನು ಕಂಡುಕೊಂಡಿರಬೇಕು. ಲೆಕ್ಕಪತ್ರಗಳನ್ನಿಡಲು ಉಪಯುಕ್ತವಾದ ಮೂಲಲಿಪಿಯನ್ನು ಮತ್ತಷ್ಟು ಪರಿಷ್ಕರಿಸುತ್ತಾ ಸುಂದರವಾದ ಸಾಹಿತ್ಯ ಕೃತಿಗಳನ್ನು ಬರೆದಿಡುವುದನ್ನು ಮಾನವ ಕಲಿತುಕೊಂಡ. ಆ ಲಿಪಿಯ ಮೂಲಕ ಪರಂಪರೆಯಿಂದ ಬಂದ ಎಷ್ಟೋ ವಿಷಯಗಳನ್ನು ಬರೆದಿಡಲು ಸಾಧ್ಯವಾಯಿತು. ಹೀಗಾಗಿ ಜ್ಞಾನ ಭಂಡಾರ ಭದ್ರವಾಯಿತು ಎಂದು ಹೀಗೆ ಹೇಳಿದ್ದಾರೆ.

ಸ್ವಾರಸ್ಯ : ಸಂಸ್ಕೃತಿಯ ಇತಿಹಾಸ ಉಳಿಯುವಲ್ಲಿ ಲಿಪಿ ಎಷ್ಟು ಮಹತ್ವಪೂರ್ಣವಾದುದು ಎಂಬುದನ್ನು ಲೇಖಕರು ವಿವರಿಸಿರುವುದು ಅತ್ಯಂತ ಸ್ವಾರಸ್ಯಪೂರ್ಣವಾದುದಾಗಿದೆ.

34. "ದೇವರೆ, ಮರ ಹತ್ತುವಷ್ಟು ಅವಕಾಶ ಕರುಣಿಸು."

ಆಯ್ಕೆ : - ಈ ವಾಕ್ಯವನ್ನು ಎ ಎನ್ ಮೂರ್ತಿರಾವ್ ಅವರ ಸಮಗ್ರ 'ಲಲಿತ ಪ್ರಬಂಧಗಳು' ಎಂಬ ಕೃತಿಯಿಂದ ಆಯ್ದ 'ವ್ಯಾಘ್ರಗೀತೆ' ಎಂಬ ಪಾಠದಿಂದ ಆರಿಸಲಾಗಿದೆ.

ಸಂದರ್ಭ : - ಶಾನುಭೋಗರು ಹುಲಿಯಿಂದ ತಪ್ಪಿಸಿಕೊಳ್ಳಲು ಖಿರ್ದಿ ಪುಸ್ತಕವನ್ನು ಬ್ರಹ್ಮಾಸ್ತ್ರದಂತೆ ಉಪಯೋಗಿಸಿ ಹುಲಿಯ ಮುಖಕ್ಕೆ ಎಸೆದರು. ಖಿರ್ದಿ ಪುಸ್ತಕ ಅದರ ಮುಖಕ್ಕೆ ಬಂದು ಬಡಿದಾಗ ಹುಲಿಗೆ ಪೆಟ್ಟೇನೂ ಆಗಲಿಲ್ಲ, ಆಶ್ಚರ್ಯವಾಯಿತು. ಬಳಲಿಕೆಯಿಂದ

ಜಡವಾಗಿದ್ದ ಮನಸ್ಸಿಗೆ ಪರಿಸ್ಥಿತಿಯ ಅರಿವಾಗಲು ಅರೆನಿಮಿಷ ಹಿಡಿಯಿತು. ಆ ಅರೆ ನಿಮಿಷದಲ್ಲಿ ಶಾನುಭೋಗರು "ದೇವರೆ, ಮರ ಹತ್ತುವಷ್ಟು ಅವಕಾಶ ಕರುಣಿಸು" ಎನ್ನುತ್ತಾ ಒಂದೇ ಉಸಿರಿನಲ್ಲಿ ಮರದ ಕಡೆಗೆ ಧಾವಿಸಿದರು.

ಸ್ವಾರಸ್ಯ : - ಶಾನುಭೋಗರು ಹುಲಿಯಿಂದ ತಪ್ಪಿಸಿಕೊಳ್ಳಲು ಮಾಡುವ ಸರ್ವಪ್ರಯತ್ನಗಳು ಇಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

35. "ನಿನಗೊಂದು ಗುಡಿಮನೆ ಕಟ್ತಾ ಇದ್ದೀವಿ ತಾಯಿ."

ಆಯ್ಕೆ : ಈ ವಾಕ್ಯವನ್ನು ದೇವನೂರ ಮಹಾದೇವ ಅವರು ಬರೆದಿರುವ ಎದೆಗೆ ಬಿದ್ದ ಅಕ್ಷರ ಎಂಬ ವೈಚಾರಿಕ ಬಿಡಿ ಲೇಖನಗಳ ಸಂಕಲನದಿಂದ ಆಯ್ದ ಎದೆಗೆ ಬಿದ್ದ ಅಕ್ಷರ ಎಂಬ ಪಾಠದಿಂದ ಆರಿಸಲಾಗಿದೆ.

ಸಂದರ್ಭ : ಕವಿ ಸಿದ್ಧಲಿಂಗಯ್ಯ ಅವರು ದೇವನೂರು ಮಹಾದೇವ ಅವರಿಗೆ ಹೇಳಿದ ಕತೆಯಲ್ಲಿ, ಒಂದ್ಸಲ ಒಂದು ಗ್ರಾಮದ ಜನರೆಲ್ಲಾ ಸೇರಿ ತಮ್ಮ ದೇವತೆಗೆ ಗುಡಿಕಟ್ಟಲು ಆರಂಭಿಸುತ್ತಾರೆ. ಹೀಗೆ ಕಟ್ತಾ ಚಾವಣಿ ಮಟ್ಟಕ್ಕೆ ಆ ಗುಡಿ ಬಂದಾಗ ಒಬ್ಬನ ಮೈಮೇಲೆ ಆ ದೇವತೆ ಮಂಚಮ್ಮ ಆವಾಹಿಸಿಕೊಂಡು "ನಿಲ್ಸಿ ನನ್ ಮಕ್ಕಳಾ" ಎಂದು ಅಬ್ಬರ ಮಾಡುತ್ತಾಳೆ. ಆ ಅಬ್ಬರಕ್ಕೆ ಜನ ತಮ್ಮ ಕೆಲ್ಸ ನಿಲ್ಸಿ ಕಕ್ಕಾಬಿಕ್ಕಿಯಾಗಿ ನೋಡುತ್ತಿರಲು ಆ ದೇವತೆ ಹಾಗೂ ಆ ಜನರ ನಡುವೆ ಮಾತುಕತೆ ನಡೆಯುತ್ತದೆ. ಆಗ ಆ ಗ್ರಾಮ ದೇವತೆ 'ಏನ್ರಯ್ಯಾ ಏನ್ ಮಾಡ್ತಾ ಇದ್ದೀರಿ?' ಎನ್ನುತ್ತಾಳೆ. ಆಗ ಅವರಲ್ಲೊಬ್ಬ ಹೀಗೆ ಉತ್ತರಿಸುತ್ತಾನೆ.

ಸ್ವಾರಸ್ಯ : ಗ್ರಾಮದೇವತೆ ಹಾಗೂ ಹಳ್ಳಿಯ ಭಕ್ತರ ನಡುವಿನ ಮಾತುಕತೆ ಅತ್ಯಂತ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

36. "ಪ್ರೀತಿಯ ಹಣತೆಯ ಹಚ್ಚೋಣ."

ಆಯ್ಕೆ :- ಈ ಸಾಲನ್ನು ಜಿ.ಎಸ್.ಶಿವರುದ್ರಪ್ಪನವರು ಬರೆದಿರುವ ಎದೆ ತುಂಬಿ ಹಾಡಿದೆನು ಎಂಬ ಆಕರ ಗ್ರಂಥದಿಂದ ಆಯ್ದ ಸಂಕಲ್ಪಗೀತೆ ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ :- ನಮಗೆ ಎದುರಾದ ಸಮಸ್ಯೆಗಳನ್ನು ಯಾವ ರೀತಿಯಿಂದ ಬಗೆಹರಿಸಿಕೊಳ್ಳಬೇಕೆಂದು ತಿಳಿಸುತ್ತ ಕವಿ ಜಿ ಎಸ್ ಶಿವರುದ್ರಪ್ಪ ಅವರು ಕಷ್ಟ, ನೋವು, ದುಃಖ, ದ್ವೇಷವೆಂಬ ಕತ್ತಲೆಯನ್ನು ಪ್ರೀತಿಯೆಂಬ ಹಣತೆಯನ್ನು ಹಚ್ಚುವ ಮೂಲಕ ಅವುಗಳನ್ನು ದೂರ ಮಾಡಬೇಕು ಎಂದು ಹಾರೈಸುತ್ತ ಹೀಗೆ ಹೇಳಿದ್ದಾರೆ

ಸ್ವಾರಸ್ಯ :- ಜನರ ನಡುವೆ ಪ್ರೀತಿಯೆಂಬ ಹಣತೆಯನ್ನು ಹಚ್ಚುವ ಮೂಲಕ ದ್ವೇಷದ ಕತ್ತಲನ್ನು ದೂರಮಾಡಬೇಕೆಂಬುದು ಇಲ್ಲಿ ಸ್ವಾರಸ್ಯ ಪೂರ್ಣವಾಗಿ ಮೂಡಿಬಂದಿದೆ.

37. "ತಿಂಗಳಿನೂರಿನ ನೀರನು ಹೀರಿ."

ಆಯ್ಕೆ:- ಈ ಸಾಲನ್ನು ಕವಿ ದ.ರಾ. ಬೇಂದ್ರೆರವರ 'ಗರಿ' ಕವನಸಂಕಲನದಿಂದಆಯ್ದ 'ಹಕ್ಕಿಹಾರುತಿದೆನೋಡಿದಿರಾ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ:- ಕಾಲಪಕ್ಷಿಯ ವ್ಯಾಪ್ತಿ ವಿಶಾಲವಾಗಿದ್ದು, ಅದು ಹಳ್ಳಿಗೆ ಮಾತ್ರವಲ್ಲದೆ, ಶುಕ್ರಗ್ರಹ ಚಂದ್ರನೆಡೆಗೂ ಹಾರಾಟ ನಡೆಸಿದೆ. ಅಂದರೆ ಮಾನವನು ವೈಜ್ಞಾನಿಕವಾಗಿ ಆಕಾಶದೆತ್ತರಕ್ಕೆ ಬೆಳೆದಿದ್ದಾನೆ. ಅವನ ಅನ್ವೇಷಣೆ ಕೇವಲ ಭೂಮಂಡಲಕ್ಕೆ ಮಾತ್ರ ಸೀಮಿತವಾಗಿಲ್ಲ. ಬೆಳ್ಳಿಯ ಅಂದರೆ ಶುಕ್ರಗ್ರಹದ ವಾಯುಮಂಡಲವನ್ನು ಪ್ರವೇಶಿಸಿದ ಮಾನವ ತಿಂಗಳಿನೂರಿನ ಅಂದರೆ ತಿಂಗಳಬೆಳಕಿನ ಚಂದ್ರನ 'ತಂಪು'ನೆಲವನ್ನುಪ್ರವೇಶಿಸಿದ್ದಾನೆ ಎಂದು ಕವಿ ಸ್ವಾರಸ್ಯಪೂರ್ಣವಾಗಿ ವಿವರಿಸಿದ್ದಾರೆ.

ಸ್ವಾರಸ್ಯ:- ಕಾಲದ ವ್ಯಾಪ್ತಿಯು ಎಷ್ಟೊಂದು ಅಗಾಧ ಹಾಗೂ ವಿಶಾಲವಾದುದು ಎಂಬುದನ್ನು ಕವಿ ಇಲ್ಲಿ ತುಂಬ ಸ್ವಾರಸ್ಯ ಪೂರ್ಣವಾಗಿ ವಿವರಿಸಿದ್ದಾರೆ.

38. "ಲಲನೆ ಪಡೆದೀಯ್ಯೆದು ಮಂತ್ರಗಳಲಿ ಮೊದಲಿಗ ನೀನು."

ಆಯ್ಕೆ : ಈ ವಾಕ್ಯವನ್ನು ಕುಮಾರವ್ಯಾಸ ಕವಿ ಬರೆದಿರುವ 'ಕರ್ಣಾಟ ಭಾರತ ಕಥಾಮಂಜರಿ' ಎಂಬ ಕಾವ್ಯದಿಂದ ಆಯ್ದ 'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯದಿಂದ ಆರಿಸಲಾಗಿದೆ.

ಸಂದರ್ಭ : ಶ್ರೀಕೃಷ್ಣನು ಕರ್ಣನ ಜೊತೆ ಮೈದುನ ತನದ ಸಲುಗೆಯನ್ನು ತೋರಿಸುತ್ತಾ, ತನ್ನ ರಥದಲ್ಲಿ ಬರಸೆಳೆದು ತನ್ನ ರಥದ ಪೀಠದಲ್ಲಿ ತೊಡೆಗೆ ತೊಡೆತಾಗುವಂತೆ ಕುಳಿತುಕೊಂಡು ಕರ್ಣನ ಜನ್ಮ ವೃತ್ತಾಂತವನ್ನು ತಿಳಿಸುತ್ತ, ನೀನು ಈ ಭೂಮಿಯ ಒಡೆಯ . ಆದರೆ ನಿನ್ನ ಮನಸ್ಸಿಗೆ ನಡೆದಹೋದ ಘಟನೆಯ ಅರಿವಿಲ್ಲ ಕುಂತಿಯು ದೂರ್ವಾಸ ಮುನಿಗಳಿಂದ ಪಡೆದ ಐದು ಮಂತ್ರಗಳಲ್ಲಿ, ಮೊದಲಿಗೆ ಸೂರ್ಯನ ಅನುಗ್ರಹದಿಂದ ಜನಿಸಿದವನು ನೀನು ಎಂದು ಹೇಳುತ್ತ ಶ್ರೀಕೃಷ್ಣನು ಕರ್ಣನ ಜನ್ಮ ವೃತ್ತಾಂತವನ್ನು ತಿಳಿಸುತ್ತಾನೆ.

ಸ್ವಾರಸ್ಯ : ಕೃಷ್ಣನು ಕರ್ಣನ ಜನ್ಮ ವೃತ್ತಾಂತವನ್ನು ತಿಳಿಸಿ, ಕರ್ಣನಿಗೆ ಪಾಂಡವರ ಮೇಲೆ ಕನಿಕರ ಬರುವಂತೆ ಮಾಡುವ ಕೃಷ್ಣನ ಬೇಧೋಪಾಯ ತಂತ್ರವು ಇಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1X4=4

39 ಕೊರಳ ಸೆರೆ ಹಿಗ್ಗಿದವು ದೃಗುಜಲ
ಉರವಣಿಸಿ ಕಡು ನೊಂದನಕಟಾ
ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ
ಹರಿಯ ಹಗೆ ಹೊಗೆದೋರದುರುಹದೆ
ಬರಿದೆ ಹೋಹುದೆ ತನ್ನ ವಂಶವ
ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ ||

ಮಾರಿಗೌತಣವಾಯ್ತು ನಾಳಿನ
ಭಾರತವು ಚತುರಂಗ ಬಲದಲಿ
ಕೌರವನ ಋಣ ಹಿಂಗೆ ರಣದಲಿ ಸುಭಟಕೋಟಿಯನು
ತೀರಿಸಿಯೆ ಪತಿಯವಸರಕ್ಕೆ ಶ
ರೀರವನು ನೂಕುವೆನು ನಿನ್ನಯ
ವೀರರೈವರ ನೋಯಿಸೆನು ರಾಜೀವಸಖನಾಣೆ ||

XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. 1X4=4

40. ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ - ಸಂಶಯದೊಳೊ ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ

ಈ ಪದ್ಯಭಾಗವನ್ನು ಜಿ ಎಸ್ ಶಿವರುದ್ರಪ್ಪ ಅವರು ಬರೆದಿರುವ ದೆ ತುಂಬಿ ಹಾಡಿದೆನು ಎಂಬ ಕವನ ಸಂಕಲನದಿಂದ ಆಯ್ದ ಸಂಕಲ್ಪಗೀತೆ ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ನಾವು ಅನುಸರಿಸುತ್ತಿರುವ ಎಲ್ಲ ಮತಗಳು ಬದುಕಿನ ದಾರಿಗಳು ಎಂಬ ಎಚ್ಚರದಲ್ಲಿ ಬದುಕಬೇಕಿದೆ. ಆಗ ಜಾತಿ ಮತ ಧರ್ಮಗಳಿಗಾಗಿ ಹೊಡೆದಾಟಗಳಾಗದೆ ಸಮಾಜದಲ್ಲಿ ಶಾಂತಿಯು ನೆಲೆಸುವಂತೆ ಮಾಡಬಹುದು. ಜಾತೀಯತೆ , ಕೋಮುವಾದ, ಪ್ರಾಂತೀಯತೆಯಂತಹ ಭಾವನೆಗಳಿಂದ ಪರಸ್ಪರರಲ್ಲಿ ಭಯ ಹಾಗೂ ಸಂಶಯಗಳಿದ್ದು, ಇದರಿಂದ ಮಸುಕಾದವರ ಕಣ್ಣುಗಳಲ್ಲಿ ಭವಿಷ್ಯದ ಹೊಂಗನಸು ಕಾಣುವಂತೆ ಭರವಸೆಯನ್ನು ತುಂಬುವ ದೃಢಸಂಕಲ್ಪವನ್ನು ಕೈಗೊಳ್ಳಬೇಕು. ಎಂದು ಕವಿ ಶ್ರೀ ಜಿ.ಎಸ್.ಶಿವರುದ್ರಪ್ಪನವರು ತಮ್ಮ ಈ ಪದ್ಯದ ಮೂಲಕ ಅತ್ಯಮೂಲ್ಯ ಸಂದೇಶ ನೀಡಿದ್ದಾರೆ.

ಈ ಪದ್ಯಭಾಗದಲ್ಲಿ ಕವಿ ಜಿ ಎಸ್ ಶಿವರುದ್ರಪ್ಪ ಅವರು ನಾವು ಮತ ಧರ್ಮಗಳ ಹೆಸರಿನಲ್ಲಿ ಜಗಳವಾಡದೆ ಒಂದಾಗಿ ಬಾಳಬೇಕೆಂಬ ಅತ್ಯಮೂಲ್ಯಸಂದೇಶ ನೀಡಿದ್ದಾರೆ.

XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2X4=8

41. ವಿಶ್ವೇಶ್ವರಯ್ಯ ಅವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.

ಉತ್ತರ : ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ವಿಶ್ವೇಶ್ವರಯ್ಯ ಅವರನ್ನು ದಿವಾನರನ್ನಾಗಿ ನೇಮಿಸುವ ಮೂಲಕ ಹೊಸ ಮನ್ವಂತರಕ್ಕೆ ಅಡಿಪಾಯ ಹಾಕಿದರು. ಆಡಳಿತದಲ್ಲಿ ಹೊಸ ಮಾದರಿಯನ್ನು ಅನುಷ್ಠಾನಗೊಳಿಸಿ ಕಚೇರಿಯ ಕೆಲಸ ಕಾರ್ಯಗಳಲ್ಲಿ ಸುಧಾರಣೆ ತಂದರು. ಅಷ್ಟೇ ಅಲ್ಲದೆ ದಕ್ಷತೆ ಮತ್ತು ಪ್ರಾಮಾಣಿಕತೆಗೆ ಒತ್ತು ನೀಡಿದರು. ಸಂಸ್ಥಾನದಲ್ಲಿ ಸ್ಥಳೀಯ ಮಟ್ಟದಲ್ಲಿ ಕೇಂದ್ರೀಕೃತವಾಗಿದ್ದ ನ್ಯಾಯಾಂಗ ಮತ್ತು ಕಾರ್ಯಾಂಗಗಳ ಅಧಿಕಾರವನ್ನು ಪ್ರತ್ಯೇಕಗೊಳಿಸಿದರು..

ಶಿಕ್ಷಣದ ವಿವಿಧ ಯೋಜನೆಗಳನ್ನು ರೂಪಿಸಿದರು. ಅದಕ್ಕಾಗಿ ೧೯೧೩ ರಲ್ಲಿ ಪ್ರಾಥಮಿಕ ಶಿಕ್ಷಣ ನಿಬಂಧನೆಯನ್ನು ಜಾರಿಗೆ ತಂದರು. ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆ ಇವರ ದೂರದೃಷ್ಟಿಯ ಮತ್ತೊಂದು ಫಲಶ್ರುತಿ. ಏಕೀಕೃತ ಕರ್ನಾಟಕದ ರಚನೆ ಮತ್ತು ಕನ್ನಡ ಭಾಷೆ ಹಾಗೂ ಸಾಹಿತ್ಯಗಳ ಬಗ್ಗೆ ಸಾರ್ವಜನಿಕರಲ್ಲಿ ಉಂಟಾಗಿದ್ದ ಒಲವನ್ನು ಮನಗಂಡು 'ಕನ್ನಡ ಸಾಹಿತ್ಯ ಪರಿಷತ್ತನ್ನು' ಸ್ಥಾಪಿಸಿದ್ದು ಇವರ ಕಾಲದ ಮತ್ತೊಂದು ಮಹತ್ವದ ಸಾಧನೆ.

ವಿಶ್ವೇಶ್ವರಯ್ಯ ಅವರು ಕೈಗಾರಿಕೆಗೆ ಅಗ್ರ ಪ್ರಾಶಸ್ತ್ಯ ನೀಡಿದ್ದರು. "ಕೈಗಾರಿಕೀಕರಣ ಇಲ್ಲವೆ ಅವನತಿ" ಎಂಬ ಘೋಷಣೆ ಮಾಡಿದರು. ಭದ್ರಾವತಿಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ, ಹೆಂಚಿನ ಕಾರ್ಖಾನೆ, ಮೂಳೆ ಮತ್ತು ಗೊಬ್ಬರ ತಯಾರಿಕಾ ಸ್ಥಾವರ, ಸಕ್ಕರೆ ಕಾರ್ಖಾನೆ, ಔಷಧಿ ತಯಾರಿಕಾ ಘಟಕ, ಗಂಧದ ಎಣ್ಣೆ, ಬೆಂಕಿಕಡ್ಡಿ ಹಾಗೂ ಕಾಗದದ ಕಾರ್ಖಾನೆ -ಹೀಗೆ ನೂರಾರು ಕೈಗಾರಿಕೆಗಳು ಇವರ ಕಾಲದಲ್ಲಿ ಪ್ರಾರಂಭಗೊಂಡವು.

೧೯೧೩ ರಲ್ಲಿ ಮೈಸೂರು ಬ್ಯಾಂಕನ್ನು ಸ್ಥಾಪಿಸಿದರು. ಅನಂತರ ಉಳಿತಾಯ ಬ್ಯಾಂಕ್‌ಗಳು ಅಸ್ತಿತ್ವಕ್ಕೆ ಬಂದವು. ಕೈಗಾರಿಕೆಗಳ ಅಭಿವೃದ್ಧಿಗೆ ಫೀಡರ್ ಬ್ಯಾಂಕ್ ಹಾಗೂ ಕೈಗಾರಿಕಾ ಹೂಡಿಕೆ ಮತ್ತು ಅಭಿವೃದ್ಧಿ ನಿಧಿಗಳು ರಚಿತಗೊಂಡವು. ಸಾರ್ವಜನಿಕ ಜೀವವಿಮಾ ಯೋಜನೆ ಜಾರಿಗೆ ತಂದರು. ಪ್ರಾಂತೀಯ ಸಹಕಾರಿ ಬ್ಯಾಂಕ್‌ಗಳನ್ನು ಸ್ಥಾಪಿಸಿದರು. ಇವೆಲ್ಲವೂ ವಿಶ್ವೇಶ್ವರಯ್ಯ ಅವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಗಳು.

**ಅಥವಾ**

ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಗಳನ್ನು ಕುರಿತು ಬರೆಯಿರಿ.

ಉತ್ತರ : ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ 'ಪ್ರಜಾಪ್ರತಿನಿಧಿ ಸಭೆ'ಯು ನೂತನ ರೂಪವನ್ನು ಪಡೆದು, ನಿಜವಾದ ಜನ ಪ್ರತಿನಿಧಿ ಸಭೆಯಾಗಿ ಪರಿವರ್ತನೆಯಾಯಿತು. ಅದಕ್ಕಾಗಿ ೧೯೨೩ರಲ್ಲಿ ಹೊಸ ಕಾನೂನೊಂದನ್ನು ಜಾರಿಗೆ ತಂದು, ಪ್ರಜಾಪ್ರತಿನಿಧಿ ಸಭೆಯನ್ನು ಶಾಸನಬದ್ಧ ಸಂಸ್ಥೆಯನ್ನಾಗಿ ಮಾರ್ಪಡಿಸಿದರು. ಇದು ಪ್ರಜಾತಂತ್ರದ ದೃಷ್ಟಿಯಿಂದ ಭಾರತದಲ್ಲಿಯೇ ಮಾದರಿಯಾದ ಸಂಸ್ಥೆಯಾಗಿ ಕಾರ್ಯ ನಿರ್ವಹಿಸಲು ಆರಂಭಿಸಿತು. ಪ್ರಜಾ ಪ್ರತಿನಿಧಿ ಸಭೆಯು ವರ್ಷಕ್ಕೆ ಎರಡು ಬಾರಿ (೧ ಜೂನ್- ಮಹಾರಾಜರ ವರ್ಧಂತಿ, ೨ ಅಕ್ಟೋಬರ್ - ದಸರಾ ಮಹೋತ್ಸವ) ಸಮಾವೇಶಗೊಂಡು ಕಲಾಪಗಳನ್ನು ನಡೆಸುತ್ತಿತ್ತು. ಅಲ್ಲಿ ವಾರ್ಷಿಕ ಆಯವ್ಯಯ ಪರಿಶೀಲನೆ, ಪ್ರಶ್ನೋತ್ತರಗಳು, ಠರಾವುಗಳನ್ನು ಮಂಡಿಸುವುದು ಮುಂತಾದ ಸಂಸದೀಯ ಮಾದರಿಯ ನಡೆವಳಿಕೆ ನಡೆಯುತ್ತಿದ್ದವು. ಪ್ರತಿನಿಧಿ ಸಭೆಯಲ್ಲಿದ್ದ ೨೭೫ ಸದಸ್ಯರಲ್ಲಿ ಹೆಚ್ಚು ಪ್ರತಿನಿಧಿಗಳು ಜನರಿಂದ ಆಯ್ಕೆಯಾದವರಾಗಿದ್ದರು.

ನಾಲ್ವಡಿ ಕೃಷ್ಣರಾಜರು ೧೯೦೭ ರಲ್ಲಿ ನ್ಯಾಯ ವಿಧಾಯಕ ಸಭೆಯನ್ನು ಸ್ಥಾಪಿಸಿದರು. ಇದರ ಸದಸ್ಯರ ಸಂಖ್ಯೆ ೫೦. ಇದರಲ್ಲಿ ಜನರಿಂದ ಆಯ್ಕೆಯಾದವರು ೨೨ ಸದಸ್ಯರು. ಮೇಲ್ಮನೆಯ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಈ ಸಂಸ್ಥೆ, ಜೂನ್ ಮತ್ತು ಡಿಸೆಂಬರ್

ತಿಂಗಳುಗಳಲ್ಲಿ ಬೆಂಗಳೂರಿನಲ್ಲಿ ಸಮಾವೇಶಗೊಳ್ಳುತ್ತಿತ್ತು. ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡಿಸಿದ ಎಲ್ಲ ವಿಷಯಗಳನ್ನು ವಿಮರ್ಶಿಸುವ ಅಧಿಕಾರ ಆ ಸಭೆಗೆ ಇದ್ದಿತು. ಮುಖ್ಯವಾಗಿ ಯಾವುದೇ ಕಾನೂನನ್ನು ಜಾರಿಗೊಳಿಸಲು ಆ ಸಭೆಯ ಅನುಮತಿ ಅಗತ್ಯವಾಗಿತ್ತು. ಆ ಸಭೆಗೆ ಸರ್ಕಾರದ ಖರ್ಚುಗಳನ್ನು ಕಡಿಮೆ ಮಾಡುವ ಅಧಿಕಾರ ಸಹ ಇದ್ದಿತು.

42. ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಉತ್ತರ :ತಂದೆ ತಾಯಿರ ಸಲಹೆಯಂತೆ ಭಿಷ್ಮಾಚಾರ್ಯರಿಗೆ ನಮಸ್ಕರಿಸಿ ಹೋಗಲು ಬಂದ ದುರ್ಯೋಧನನ್ನು ಕುರಿತು ಭೀಷ್ಮಚಾರ್ಯರು ದುರ್ಯೋಧನ ನೀನು ಒಪ್ಪುವುದಾದರೆ ಪಾಂಡವರನ್ನು ಒಪ್ಪಿಸಿ ಸಂಧಿಯನ್ನು ಮಾಡಿ ಹಿಂದಿನಂತೆ ನಡೆಯುವ ಹಾಗೆ ಮಾಡುವೆನು. ಇನ್ನು ಅವರು ನಮ್ಮ ಮಾತನ್ನು ಒಪ್ಪಿಕೊಳ್ಳದೆ ಮೀರುವವರಲ್ಲ. ನೀನೂ ಸಹ ನಾನು ಹೇಳುವುದನ್ನು ಮೀರದೆ ನಡೆದುಕೊಳ್ಳಲೇಬೇಕು ಎಂದು ಹೇಳುತ್ತಾರೆ.

ಆಗ ದುರ್ಯೋಧನನು ಮುಗುಳು ನಗೆ ನಗುತ್ತ , ಭೀಷ್ಮರನ್ನು ಕುರಿತು, ನಿಮಗೆ ನಮಸ್ಕರಿಸಿ ಹೋಗಲೆಂದು ಬಂದೆನೇ ಹೊರತು ಶತ್ರುಗಳೊಡನೆ ಒಪ್ಪಂದವನ್ನು ಏರ್ಪಡಿಸುವುದಕ್ಕೆಂದು ಬಂದೆನೆ ಅಜ್ಜಾ ಮುಂದೆ ನಡೆಯುವ ಯುದ್ಧದಲ್ಲಿ ನನ್ನ ಕಾರ್ಯವೇನು ಎಂಬುದನ್ನು ಹೇಳಿರಿ ಎಂದು ಹೇಳುತ್ತಾನೆ. ನಾನು ಭೂಮಿಗಾಗಿ ಹೋರಾಡುವೆನೆಂದು ಭಾವಿಸಿದಿರಾ? ನಾನು ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು. ಈ ಭೂಮಿ ನನಗೆ ಪಾಳು ಭೂಮಿ.

ದಿನಪಸುತನಾದ ಕರ್ಣನನ್ನು ಕೊಲ್ಲಿಸಿದ ಈ ಭೂಮಿಯೊಡನೆ ನಾನು ಮತ್ತೆ ಬಾಳುವುದುಂಟೇ, ನನ್ನ ಪ್ರೀತಿಯ ಗೆಳೆಯನಾದ ಕರ್ಣನನ್ನು, ನನ್ನ ಪ್ರೀತಿಯ ತಮ್ಮನಾದ ದುಶ್ಯಾಸನನ್ನು ಕೊಂದ ಅರ್ಜುನ, ಭೀಮರು ಬದುಕಿರುವವರೆಗೆ, ನನ್ನ ದೇಹದಲ್ಲಿ ಪ್ರಾಣ ಇರುವವರೆಗೂ ಅಜ್ಜಾ, ನಾನು ಸಂಧಿಯನ್ನು ಒಪ್ಪುವುದಿಲ್ಲ. ಮೊದಲು ಆ ಇಬ್ಬರನ್ನೂ ಕೊಲ್ಲುವೆನು. ಅವರನ್ನು ಕೊಂದ ಬಳಿಕ ಧರ್ಮರಾಯನ ಜೊತೆ ಸಂಧಿಮಾಡಿಕೊಳ್ಳಲು ಬೇಕಾದರೆ ಒಪ್ಪುತ್ತೇನೆ.

ಹುಟ್ಟಿದ ನೂರು ಜನರೂ, ನನ್ನ ಒಡ ಹುಟ್ಟಿದ ನೂರು ಮಂದಿ ಸಹೋದರರು ಯುದ್ಧದಲ್ಲಿ ಹೋರಾಡಿ ಸತ್ತರು. ಆದ್ದರಿಂದ ನನ್ನಲ್ಲಿ ಕೋಪ ಹುಟ್ಟಿ ಬೆಳೆದಿದೆ. ಸತ್ತವರೇನು ಮತ್ತೆ ಹುಟ್ಟುವುದಿಲ್ಲವೇ? ಪಾಂಡವರೊಡನೆ ಹೋರಾಡಿ ನನ್ನ ಛಲವನ್ನೇ ಮೆರೆಯುತ್ತೇನೆ, ನಾನು ಹೋರಾಡದೆ ಬಿಡುವುದಿಲ್ಲ. ಇಂದಿನ ಯುದ್ಧದಲ್ಲಿ ಪಾಂಡವರು ಉಳಿಯಬೇಕು ಇಲ್ಲವೆ ನಾನು ಉಳಿಯಬೇಕು. ಈ ಭೂಮಿ ಪಾಂಡವರದಾಗಬೇಕು ಇಲ್ಲವೇ ಕೌರವನಾದ ನನ್ನದಾಗಬೇಕು ಎಂದು ಹೇಳಿದನು.

ಅಥವ

ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.

ಉತ್ತರ : ದುರ್ಯೋಧನನು ತಂದೆ-ತಾಯಿಯರ ಅಪೇಕ್ಷೆಯಂತೆ ರಣರಂಗದಲ್ಲಿ ಶರಶಯ್ಯೆಯಲ್ಲಿ ಮಲಗಿದ್ದ ತಾತ ಭೀಷ್ಮರ ಸಲಹೆಯನ್ನು ಪಡೆಯಲು ಬರುತ್ತಾನೆ. ಭೀಷ್ಮರು ಯುದ್ಧವನ್ನು ಮಾಡದೆ ಪಾಂಡವರೊಂದಿಗೆ ಸಂಧಿ ಮಾಡಿಕೊಂಡು ಬದುಕಬೇಕೆಂಬ ಸಲಹೆಯನ್ನು ದುರ್ಯೋಧನನಿಗೆ ನೀಡುತ್ತಾ, ನೀನು ಒಪ್ಪುವುದಾದರೆ ಪಾಂಡವರನ್ನು ಒಪ್ಪಿಸಿ ಸಂಧಿಯನ್ನು ಮಾಡಿ ಹಿಂದಿನಂತೆ ನಡೆಯುವ ಹಾಗೆ ಮಾಡುವೆನು. ಇನ್ನು ಅವರು ನಮ್ಮ ಮಾತನ್ನು ಒಪ್ಪಿಕೊಳ್ಳದೆ ಮೀರುವವರಲ್ಲ. ನೀನೂ ಸಹ ನಾನು ಹೇಳುವುದನ್ನು ಮೀರದೆ ನಡೆದುಕೊಳ್ಳಲೇಬೇಕು ಎಂದು ಹೇಳುತ್ತಾರೆ.

ಆಗ ದುರ್ಯೋಧನನು ಮುಗುಳು ನಗೆ ನಗುತ್ತ, ಭೀಷ್ಮರನ್ನು ಕುರಿತು, ನಿಮಗೆ ನಮಸ್ಕರಿಸಿ ಹೋಗಲೆಂದು ಬಂದೆನೇ ಹೊರತು ಶತ್ರುಗಳೊಡನೆ ಒಪ್ಪಂದವನ್ನು ಏರ್ಪಡಿಸುವುದಕ್ಕೆಂದು ಬಂದೆನೆ? ಅಜ್ಜಾ ಮುಂದೆ ನಡೆಯುವ ಯುದ್ಧದಲ್ಲಿ ನನ್ನ

ಕಾರ್ಯವೇನೆಂಬುದನ್ನು ಹೇಳಿರಿ. ನಾನು ಭೂಮಿಗಾಗಿ ಹೋರಾಡುವೆನೆಂದು ಭಾವಿಸಿದಿರಾ? ನಾನು ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು. ಈ ಭೂಮಿ ನನಗೆ ಪಾಳು ಭೂಮಿ. ದಿನಪಸುತನಾದ ಕರ್ಣನನ್ನು ಕೊಲ್ಲಿಸಿದ ಈ ಭೂಮಿಯೊಡನೆ ನಾನು ಮತ್ತೆ ಬಾಳುವುದುಂಟೇ? ಎಂದು ಹೇಳುತ್ತಾನೆ.

ನನ್ನ ಪ್ರೀತಿಯ ಗೆಳೆಯನಾದ ಕರ್ಣನನ್ನು, ನನ್ನ ಪ್ರೀತಿಯ ತಮ್ಮನಾದ ದುಶ್ಯಾಸನನ್ನು ಕೊಂದ ಅರ್ಜುನ, ಭೀಮರು ಬದುಕಿರುವವರೆಗೆ,ನನ್ನ ದೇಹದಲ್ಲಿ ಪ್ರಾಣ ಇರುವವರೆಗೂ ನಾನು ಸಂಧಿಯನ್ನು ಒಪ್ಪುವುದಿಲ್ಲ. ಮೊದಲು ಆ ಇಬ್ಬರನ್ನೂ ಕೊಲ್ಲುವೆನು. ಅವರನ್ನು ಕೊಂದ ಬಳಿಕ ಧರ್ಮರಾಯನ ಜೊತೆ ಸಂಧಿಮಾಡಿಕೊಳ್ಳಲು ಬೇಕಾದರೆ ಒಪ್ಪುತ್ತೇನೆ. ಪಾಂಡವರೊಡನೆ ಹೋರಾಡಿ ಛಲವನ್ನೇ ಮೆರೆಯುತ್ತೇನೆ. ನಾನು ಹೋರಾಡದೆ ಬಿಡುವುದಿಲ್ಲ. ಇಂದಿನ ಯುದ್ಧದಲ್ಲಿ ಪಾಂಡವರು ಉಳಿಯಬೇಕು, ಇಲ್ಲವೆ ನಾನು ಉಳಿಯಬೇಕು. ಈ ಭೂಮಿ ಪಾಂಡವರದಾಗಬೇಕು ಇಲ್ಲವೇ ಕೌರವನದಾಗಬೇಕು ಎಂದು ಹೇಳಿದನು.

ಹೀಗೆ ಭೀಷ್ಮರೊಂದಿಗೆ ಮಾತನಾಡುವ ಸಂದರ್ಭದಲ್ಲಿ ಪ್ರಕಟಗೊಳ್ಳುವ ದುರ್ಯೋಧನನ ಛಲದ ಗುಣ, ಅವನ ಸ್ವಭಾವಕ್ಕೆ ತಕ್ಕುದಾಗಿ ಇಲ್ಲಿ ನಿರೂಪಿತವಾಗಿದೆ.

XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 2+2 = 4

ಭಯದ ಮೂಲವಿರುವುದು ಆಕಾಶದ ಯಾವುದೇ ಮೂಲೆಯಲ್ಲಲ್ಲ. ಆಕಾಶದಿಂದ ಬಾಂಬುಗಳು ಉದುರಿದರೂ, ಕಾರ್ಖಾನೆಗಳಲ್ಲಿ ಅವು ತಯಾರಾಗಿದ್ದರೂ, ಮನುಷ್ಯನ ಮನಸ್ಸಿನಲ್ಲಿರುವ ಭಯವೇ ಅದರ ಮೂಲ ಕಾರಣ. ಭಯ ನಮ್ಮನ್ನು ಆವರಿಸಿದಾಗ ಎದೆ ಬಡಿತ ಹೆಚ್ಚುತ್ತದೆ, ಉಸಿರಾಡಲು ಕಷ್ಟವೆನಿಸುತ್ತದೆ, ನಡುಕ ಉಂಟಾಗುತ್ತದೆ, ಮೈ ಬೆವರುತ್ತದೆ. ಭಯ ನಮ್ಮ ವಿಚಾರಶಕ್ತಿಯನ್ನೂ ಮೊಟಕುಗೊಳಿಸುತ್ತದೆ. ದೈಹಿಕವಾಗಿಯೂ, ಮಾನಸಿಕವಾಗಿಯೂ ನಮ್ಮನ್ನು ದುರ್ಬಲಗೊಳಿಸುತ್ತದೆ. ನಮ್ಮ ಆತ್ಮವಿಶ್ವಾಸವನ್ನು ಅಲುಗಾಡಿಸುತ್ತದೆ. ಯಾವುದೇ ಕಾರ್ಯವನ್ನು ಕೈಗೊಂಡು ಅದನ್ನು ಯಶಸ್ವಿಯಾಗಿ ಮುಗಿಸಲು ತಡೆ ಒಡ್ಡುತ್ತದೆ. ಸದ್ಭಾವನೆ, ಪ್ರೀತಿ, ವಿಶ್ವಾಸ, ಸ್ನೇಹ, ಕರುಣೆಗಳನ್ನು ಇಲ್ಲವಾಗಿಸುತ್ತದೆ. ಚಿಂತೆ, ಸಂತೋಷ, ಸಿಟ್ಟು, ಶಾಂತತೆ ಇವು ಹೇಗೆ ಮನಸ್ಸಿನ ಸ್ವಭಾವವೋ, ಹಾಗೆಯೇ ಭಯವೂ ಕೂಡ ಮನಸ್ಸಿನ ಒಂದು ಸ್ವಭಾವವಾಗಿದೆ. ನಿರ್ಭೀತಿಯ ಭಾವನೆಗಳನ್ನು ನಿಯಮಿತ ರೀತಿಯಲ್ಲಿ ಮೆಲುಕಾಡುತ್ತ ; ನಿಯಮಿತ ರೀತಿಯಲ್ಲಿ ಸಾವಕಾಶವಾಗಿ ಅಭ್ಯಾಸ ಮಾಡಿದರೆ ಭಯಪಡುವ ಸ್ವಭಾವವು ಬದಲಾಗುವುದು. ಒಬ್ಬ ನಿರ್ಭೀತಿಯ ಮಹಾವೀರ ತನ್ನ ಬದುಕಿನಲ್ಲಿ ಧೈರ್ಯ; ಪರಾಕ್ರಮ, ಉನ್ನತ ಆದರ್ಶಗಳ ಮೂಲಕ ಜನಾಂಗದ ಭೀತಿಯನ್ನೇ ದೂರ ಮಾಡಬಲ್ಲ. ಸ್ವಾಮಿ ವಿವೇಕಾನಂದರ ಜೀವನದಲ್ಲೂ, ಗಾಂಧೀಜಿಯವರ ಜೀವನದಲ್ಲೂ ನಾವು ಇದನ್ನೇ ಕಾಣುತ್ತೇವೆ.

ಪ್ರಶ್ನೆಗಳು :

43. ಅ) ಭಯದ ಸ್ವಭಾವವನ್ನು ಹೇಗೆ ಬದಲಿಸಿಕೊಳ್ಳಬಹುದು?

ಉತ್ತರ : ಚಿಂತೆ, ಸಂತೋಷ, ಸಿಟ್ಟು, ಶಾಂತತೆ ಇವು ಹೇಗೆ ಮನಸ್ಸಿನ ಸ್ವಭಾವವೋ, ಹಾಗೆಯೇ ಭಯವೂ ಕೂಡ ಮನಸ್ಸಿನ ಒಂದು ಸ್ವಭಾವವಾಗಿದೆ. ಹಾಗಾಗಿ, ನಿರ್ಭೀತಿಯ ಭಾವನೆಗಳನ್ನು ನಿಯಮಿತ ರೀತಿಯಲ್ಲಿ ಮೆಲುಕಾಡುತ್ತ ; ನಿಯಮಿತ ರೀತಿಯಲ್ಲಿ ಸಾವಕಾಶವಾಗಿ ಅಭ್ಯಾಸ ಮಾಡಿದರೆ ಭಯಪಡುವ ಸ್ವಭಾವವು ಬದಲಾಗುವುದು.

ಬ) ಭಯದಿಂದಾಗುವ ಪರಿಣಾಮಗಳೇನು?

ಉತ್ತರ : . ಭಯದಿಂದಾಗುವ ಪರಿಣಾಮಗಳೆಂದರೆ, ಎದೆ ಬಡಿತ ಹೆಚ್ಚುತ್ತದೆ, ಉಸಿರಾಡಲು ಕಷ್ಟವೆನಿಸುತ್ತದೆ, ನಡುಕ ಉಂಟಾಗುತ್ತದೆ, ಮೈ ಬೆವರುತ್ತದೆ. ಭಯ ನಮ್ಮ ವಿಚಾರಶಕ್ತಿಯನ್ನೂ ಮೊಟಕುಗೊಳಿಸುತ್ತದೆ. ದೈಹಿಕವಾಗಿಯೂ, ಮಾನಸಿಕವಾಗಿಯೂ ನಮ್ಮನ್ನು ದುರ್ಬಲಗೊಳಿಸುತ್ತದೆ. ನಮ್ಮ ಆತ್ಮವಿಶ್ವಾಸವನ್ನು ಅಲುಗಾಡಿಸುತ್ತದೆ. ಯಾವುದೇ ಕಾರ್ಯವನ್ನು ಕೈಗೊಂಡು ಅದನ್ನು ಯಶಸ್ವಿಯಾಗಿ ಮುಗಿಸಲು ತಡೆ ಒಡ್ಡುತ್ತದೆ. ಸದ್ಭಾವನೆ, ಪ್ರೀತಿ, ವಿಶ್ವಾಸ, ಸ್ನೇಹ, ಕರುಣೆಗಳನ್ನು ಇಲ್ಲವಾಗಿಸುತ್ತದೆ.

XIV.ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1X5=5

44. ನಿಮ್ಮನ್ನು ಹಾಸನದ ನಿವಾಸಿ 'ರಾಕೇಶ' ಎಂದು ಭಾವಿಸಿಕೊಂಡು, ನಿಮ್ಮ ಪ್ರದೇಶದಲ್ಲಿ ಅತಿವೃಷ್ಟಿಯಿಂದಾದ ಅನಾಹುತಗಳಿಗೆ ಪರಿಹಾರ ಕೋರಿ ಜಿಲ್ಲಾಧಿಕಾರಿಗಳಿಗೆ ಪತ್ರವನ್ನು ಬರೆಯಿರಿ.

ಇವರಿಂದ

ರಾಕೇಶ
10ನೇ ತರಗತಿ
ಹಾಸನ

ಸ್ಥಳ : ಹಾಸನ
ದಿನಾಂಕ : 24/09/2024

ಇವರಿಗೆ,

ಮಾನ್ಯ ಜಿಲ್ಲಾಧಿಕಾರಿಗಳು
ಜಿಲ್ಲಾಧಿಕಾರಿಗಳ ಕಛೇರಿ
ಹಾಸನ ಜಿಲ್ಲೆ

ಮಾನ್ಯರೆ,

ವಿಷಯ : ಅತಿವೃಷ್ಟಿಯಿಂದಾದ ಅನಾಹುತಗಳಿಗೆ ಪರಿಹಾರ ಕೋರಿ ಮನವಿ.

ಈ ಮೂಲಕ ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ನಮ್ಮ ಊರಿನಲ್ಲಿ ಕಳೆದ ಆಗಸ್ಟ್ ಹಾಗೂ ಸೆಪ್ಟೆಂಬರ್ ತಿಂಗಳುಗಳಲ್ಲಿ ಅತೀ ಹೆಚ್ಚು ಮಳೆ ಆಗಿರುತ್ತದೆ. ಇದರಿಂದಾಗಿ ನಾವು ಬೆಳೆದ ಬೆಳೆ ನೀರುಪಾಲಾಗಿದೆ. ಮಾತ್ರವಲ್ಲ ಅತಿಯಾಗಿ ಸುರಿದ ಮಳೆ ಹಾಗೂ ಬಿರುಗಾಳಿಯಿಂದಾಗಿ ನಮ್ಮ ಮನೆ ಹಾಗೂ ಕೊಟ್ಟಿಗೆಗೂ ಸಾಕಷ್ಟು ಹಾನಿ ಉಂಟಾಗಿದೆ. ಇದರಿಂದ ಸುಮಾರು ಎರಡು ಲಕ್ಷಕ್ಕೂ ಅಧಿಕ ನಷ್ಟಾಗಿರುತ್ತದೆ.

ಆದ್ದರಿಂದ ತಾವು ದಯಮಾಡಿ ನಮ್ಮ ಪ್ರದೇಶಕ್ಕೆ ಭೇಟಿ ನೀಡಿ ಆದ ನಷ್ಟವನ್ನು ಅವಲೋಕನ ಮಾಡಿ ಸೂಕ್ತ ಪರಿಹಾರವನ್ನು ನೀಡಬೇಕಾಗಿ ವಿನಂತಿಸಿಕೊಳ್ಳುತ್ತಿದ್ದೇನೆ.

- ಧನ್ಯವಾದಗಳೊಂದಿಗೆ -

ಇಂತಿ ತಮ್ಮ ವಿಶ್ವಾಸಿ
ರಾಕೇಶ

ಹೊರವಿಳಾಸ

ಇವರಿಗೆ.

ಜಿಲ್ಲಾಧಿಕಾರಿಗಳು
ಕರ್ನಾಟಕ ಸರ್ಕಾರ
ಹಾಸನ ಜಿಲ್ಲೆ

ಅಥವಾ

ನಿಮ್ಮನ್ನು ಬಾಗಲಕೋಟೆಯ ಸರ್ಕಾರಿ ಪ್ರೌಢಶಾಲೆಯ 'ರೂಪಶ್ರೀ' ಎಂದು ಭಾವಿಸಿಕೊಂಡು, ಶಾಲೆಯಲ್ಲಿ ಹಮ್ಮಿಕೊಂಡ 'ಪ್ರತಿಭಾ ಕಾರಂಜಿ' ಕಾರ್ಯಕ್ರಮವನ್ನು ವಿವರಿಸಿ, ಧಾರವಾಡದ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ 'ಗೌರಿ' ಎಂಬ ಹೆಸರಿನ ಗೆಳತಿಗೆ ಪತ್ರವನ್ನು ಬರೆಯಿರಿ.

ಕ್ಷೇಮ ಶ್ರೀ ರೂಪಶ್ರೀ

10ನೇತರಗತಿ

ಸರ್ಕಾರಿ ಪ್ರೌಢಶಾಲೆ

ಬಾಗಲಕೋಟೆ

ಪ್ರೀತಿಯ ಗೆಳತಿ ಗೀತಾಳಿಗೆ,

ನಿನ್ನ ಗೆಳತಿ ರೂಪಶ್ರೀಯ ಶುಭ ಹಾರೈಕೆಗಳು. ನಾನು ಕ್ಷೇಮವಾಗಿದ್ದೀನಿ. ನೀನು ಕ್ಷೇಮವಾಗಿದ್ದೀಯ ಎಂದು ಭಾವಿಸುತ್ತೇನೆ. ನಿನ್ನ ಕ್ಷೇಮಸಮಾಚಾರಕ್ಕೆ ಪತ್ರ ಬರೆ.

ಈ ಪತ್ರವನ್ನು ಬರೆಯಲು ಕಾರಣವೇನೆಂದರೆ ನಮ್ಮ ಶಾಲೆಯಲ್ಲಿ 'ಪ್ರತಿಭಾ ಕಾರಂಜಿ' ಕಾರ್ಯಕ್ರಮವನ್ನು ಇದೇ ತಿಂಗಳ 10ನೇ ತಾರೀಖು ಹಮ್ಮಿಕೊಂಡಿದ್ದರು. ಅದರ ಸವಿನೆನಪುಗಳನ್ನು ನಿನ್ನೊಂದಿಗೆ ಹಂಚಿಕೊಳ್ಳುವ ಆಸೆಯಿಂದ ಈ ಪತ್ರವನ್ನು ಬರೆಯುತ್ತಿದ್ದೇನೆ.

ಅಂದು ನಮ್ಮ ಶಾಲೆಯ ವಿದ್ಯಾರ್ಥಿಗಳಲ್ಲಿನ ಪ್ರತಿಭೆಗಳನ್ನು ಹೊರಹಾಕಲು ಅವಕಾಶ ಮಾಡಿಕೊಟ್ಟಿದ್ದರು. ಚರ್ಚಾ ಸ್ಪರ್ಧೆ, ಭಾಷಣ ಸ್ಪರ್ಧೆ, ರಸಪ್ರಶ್ನೆ ಸ್ಪರ್ಧೆ, ರಂಗೋಲಿ ಬಿಡಿಸುವುದು, ಚಿತ್ರ ಬಿಡಿಸುವುದು, ಪ್ರಬಂಧ ರಚನೆ, ಭಕ್ತಿಗೀತೆ, ಜನಪದಗೀತೆ, ಮಿಮಿಕ್ರಿ ಮುಂತಾದ ಸ್ಪರ್ಧೆಗಳಿದ್ದವು. ಇದರಲ್ಲಿ ನಾನು ರಂಗೋಲಿ ಬಿಡಿಸುವುದು, ಚಿತ್ರ ಬಿಡಿಸುವುದು, ಭಾಷಣ ಸ್ಪರ್ಧೆ ಯಲ್ಲಿ ಭಾಗವಹಿಸದ್ದೆ. ನನಗೆ ರಂಗೋಲಿ ಬಿಡಿಸುವುದರಲ್ಲಿ ಪ್ರಥಮ ಸ್ಥಾನ ಬಂದಿತು. ಇದು ನನಗೆ ಅತೀ ಸಂತೋಷ ನೀಡಿತು.

ಹಾಗೆಯೇ ನಮ್ಮ ಶಾಲೆಯ ಎಲ್ಲ ವಿದ್ಯಾರ್ಥಿಗಳು ಈ ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ಭಾಗವಹಿಸಿ ಖುಷಿಪಟ್ಟರು. ನೀನು ಸಹ ನಿಮ್ಮ ಶಾಲೆಯಲ್ಲಿ ಆಚರಿಸಿದ ಪ್ರತಿಭಾ ಕಾರಂಜಿಯ ಅನುಭವಗಳನ್ನು ಪತ್ರ ಬರೆದು ತಿಳಿಸು.

ನಿನ್ನ ಪತ್ರಕ್ಕಾಗಿ ಕಾಯುತ್ತಿರುತ್ತೇನೆ.

ಇಂತಿ ನಿನ್ನ ಪ್ರೀತಿಯ ಗೆಳತಿ

ರೂಪಶ್ರೀ

ಗೆ,

ಗೌರಿ

10ನೇ ತರಗತಿ

ಸರ್ಕಾರಿ ಪ್ರೌಢಶಾಲೆ

ಧಾರವಾಡ

**XV.** ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ**.** 1X5=5

45. **ಗ್ರಂಥಾಲಯಗಳ ಮಹತ್ವ**

ಗ್ರಂಥಗಳು ನಮ್ಮ ಜ್ಞಾನಾರ್ಜನೆಯಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತವೆ. ಇಂತಹ ಹಲವಾರು ಗ್ರಂಥಗಳ ಆಲಯವೇ ಗ್ರಂಥಾಲಯ. ಗ್ರಾಮ ತಾಲ್ಲೂಕ ಜಿಲ್ಲಾ ಹಂತದಲ್ಲಿ ಮಾತ್ರವಲ್ಲದೆ, ಶಾಲಾ ಕಾಲೇಜುಗಳಲ್ಲಿ ಹಾಗೂ ಕೆಲವರ ಮನೆಗಳಲ್ಲೂ ಗ್ರಂಥಾಲಯ ಇರುತ್ತದೆ.

ಹಾಗಾದರೆ ಈ ಗ್ರಂಥಾಲಯದಿಂದ ಇರುವ ಉಪಯೋಗ ಏನು ಇದರ ಮಹತ್ವ ಏನು ಎಂಬುದನ್ನು ನೋಡುವುದಾದರೆ, ಮೊದಲನೆಯದಾಗಿ, ನಾವು ಗ್ರಂಥಾಲಯಗಳಲ್ಲಿ ಹಲವಾರು ಬಗೆಯ ಪುಸ್ತಕಗಳನ್ನು ಕಾಣಬಹುದಾಗಿದೆ. ಇದು ನಮಗೆ ಸಾಹಿತ್ಯದ ವಿಧಗಳ ಪರಿಚಯ ಮಾಡಿಕೊಡುತ್ತದೆ. ಕತೆ, ಕಾದಂಬರಿ, ಕವನಸಂಕಲನ, ಪ್ರವಾಸಕಥನ, ಜೀವನಚರಿತ್ರೆ ಇತ್ಯಾದಿ ಸಾಹಿತ್ಯದ ವಿವಿಧ ವಿಧಗಳ ಪುಸ್ತಕ ಓದಬಹುದು.

ಇಂತಹ ಪುಸ್ತಕಗಳನ್ನು ನಾವು ಕೊಂಡು ಓದಬೇಕಾದರೆ ಅದಕ್ಕೆ ಬಹಳ ಹಣ ಖರ್ಚಾಗುತ್ತದೆ. ಆದರೆ ಗ್ರಂಥಾಲಯದಲ್ಲಿ ನಮಗೆ ಇವು ಎರವಲು ರೂಪದಲ್ಲಿ ಉಚಿತವಾಗಿ ಸಿಗುತ್ತದೆ. ಇಂತಹ ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳುವುದರಿಂದ ನಮಗೆ ಓದುವ ಅಭಿರುಚಿ, ಸಾಹಿತ್ಯದ ಮೇಲೆ ಆಸಕ್ತಿ ಮೂಡುತ್ತದೆ. ಇದರಿಂದ ನಮ್ಮ ಜ್ಞಾನಾಭಿವೃದ್ಧಿ ಆಗುವುದರ ಜೊತೆಗೆ, ಅತೀ ಹೆಚ್ಚಿನ ಓದು ನಮಗೆ ಮುಂದೆ ಬರೆಯಲೂ ಪ್ರೇರಣೆ ನೀಡಬಹುದು.

ಗ್ರಂಥಾಲಯದಲ್ಲಿ ಅತೀ ಹೆಚ್ಚಿನ ಸಮಯವನ್ನು ಕಳೆಯುವುದರಿಂದ ಸಮಯದ ಸದ್ಬಳಕೆ ಆಗುತ್ತದೆ. ವಿದ್ಯಾರ್ಥಿಗಳು ಪಠ್ಯಕ್ಕೆ ಪೂರಕವಾದ ಇನ್ನಷ್ಟು ಮಾಹಿತಿಹಗಳನ್ನು ಸಹ ಪಡೆಯಬಹುದಾಗಿದೆ. ಮುಖ್ಯವಾಗಿ ಓದು ನಮ್ಮ ಕಾಗ್ರತೆಯನ್ನು ಹೆಚ್ಚಿಸುತ್ತದೆ.

ಹಾಗೆಯೇ ಗ್ರಂಥಾಲಯದಲ್ಲಿನ ನಿಶ್ಯಬ್ಧತೆ ನಮ್ಮ ಏಕಾಗ್ರತೆಯನ್ನು ಹೆಚ್ಚಿಸುತ್ತದೆ. ಹಾಗೂ ನಿರಂತರವಾಗಿ ಗ್ರಂಥಾಲಯಗಳಿಗೆ ಭೇಟಿ ನೀಡಿ ಪುಸ್ತಕಗಳನ್ನು ಓದುವುದರಿಂದ ನಮ್ಮೋದಿನ ವೇಗವೂ ಸಹ ಇಮ್ಮಡಿಗೊಳ್ಳುತ್ತದೆ.

ಪುಸ್ತಕ ಎನ್ನುವುದು ವ್ಯಕ್ತಿಗೆ ಅತ್ಯುತ್ತಮ ಸನ್ಮಿತ್ರನಂತೆ. ಇಂತಹ ಹಲವಾರು ಪುಸ್ತಕಗಳನ್ನು ಹೊಂದಿರುವ ಗ್ರಂಥಾಲಯ ನಮಗೆ ಮಿತ್ರರ ಮನೆಯಂತೆ. ಇಂತಹ ಗ್ರಂಥಾಲಯವನ್ನು ನಾವು ವಿದ್ಯಾರ್ಥಿ ಜೀವನದಲ್ಲಿ ಸದ್ಬಳಕೆ ಮಾಡಿಕೊಂಡು ನಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳುವ ಕಾರ್ಯ ಮಾಡಬೇಕಾಗಿದೆ.

ಅಥವಾ

**ಶಾಲೆಯಲ್ಲಿನ ಭಾಷಾ ಸಂಘದ ಕಾರ್ಯಚಟುವಟಿಕೆಗಳು**

ಶಾಲೆಗಳಲ್ಲಿ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗಾಗಿ ಹಲವಾರು ಸಂಘಗಳನ್ನು ರಚಿಸಿರುತ್ತಾರೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ, ಪರಿಸರ ಸಂಘ, ಕ್ರೀಡಾ ಸಂಘ, ವಿಜ್ಞಾನ ಸಂಘ, ಭಾಷಾ ಸಂಘ, ಗ್ರಾಹಕ ಕ್ಲಬ್, ಇಕೋ ಕ್ಲಬ್, ಚುನಾವನಾ ಸಾಕ್ಷರತಾ ಸಂಘ ಇತ್ಯಾದಿ. ಇವುಗಳೆಲ್ಲವೂ ತಮ್ಮದೇ ಆದ ಧ್ಯೇಯೋದ್ಧೇಶಗಳನ್ನು ಹೊಂದಿರುತ್ತವೆ.

ಈ ಎಲ್ಲ ಸಂಘಗಳಂತೆ ವಿದ್ಯಾರ್ಥಿಗಳಲ್ಲಿನ ಭಾಷಾ ಕೌಶಲಗಳನ್ನು ಹೆಚ್ಚಿಸಲು ರಚನೆಯಾಗಿರುವ ಸಂಘವೇ ಭಾಷಾ ಸಂಘ. ಭಾಷೆಯಲ್ಲಿ ಆಲಿಸುವಿಕೆ. ಮಾತುಗಾರಿಕೆ, ಓದುಗಾರಿಕೆ, ಬರೆವಣಿಗೆ ಪ್ರಮುಖವಾದ ನಾಲ್ಕು ಕೌಶಲಗಳಾಗಿದ್ದು ಇವುಗಳನ್ನು ವಿದ್ಯಾರ್ಥಿಗಳನ್ನು ಪೆಇಪೂರ್ಣರಾಗಿಸುವ ನಿಟ್ಟಿನಲ್ಲಿ ರಚನೆಯಾದ ಸಂಘ ಭಾಷಾ ಸಂಘ.

ಇದರ ಕಾರ್ಯಚಟುವಟಿಕೆಗಳನ್ನು ನಾವು ನೋಡುವುದಾದರೆ,

ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸುವುದು - ಭಾಷಣ, ಪ್ರಬಂಧ, ಚಿತ್ರಕಲೆ, ಚರ್ಚಾಸ್ಪರ್ಧೆ, ಗಾಯನ ಸ್ಪರ್ಧೆ ಇತ್ಯಾದಿಗಳನ್ನು ಏರ್ಪಡಿಸುವುದು. ಆ ಮೂಲಕ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಮೂಡಿಸುವ ಕೆಲಸ ಮಾಡುವುದರೊಂದಿಗೆ ಸಭಾಕಂಪನ ವನ್ನು ದೂರ ಮಾಡುವುದಾಗಿದೆ.

ಗ್ರಂಥಾಲಯದಲ್ಲಿನ ಪುಸ್ತಕಗಳನ್ನು ಓದಲು ನೀಡುವುದು - ಇದರ ಮೂಲಕ ವಿದ್ಯಾರ್ಥಿಗಳಿಗೆ ಪುಸ್ತಕದ ಪರಿಚಯ ಆಗುತ್ತದೆ. ಓದುವ ಹವ್ಯಾಸ ಬೆಳೆಯುತ್ತದೆ. ಇದರೊಂದಿಗೆ ತಾವು ಓದಿದ ಪುಸ್ತಕಗಳ ಬಗ್ಗೆ ಅಭಿಪ್ರಾಯಗಳನ್ನು ಹೇಳಲು ಅವಕಾಶ ಮಾಡಿಕೊಡುವುದು.

ವಿಚಾರ ಗೋಷ್ಠಿ ಏರ್ಪಡಿಸುವುದು - ಸ್ಥಳೀಯ ಸಾಹಿತಿಗಳನ್ನು ಅಥವಾ ಭಾಷಣಕಾರರನ್ನು ಕರೆಸಿ ಪ್ರಚಲಿತ ಅಥವಾ ಪ್ರಮುಖ ವಿಷಯಗಳ ಬಗ್ಗೆ ವಿಚಾರ ಗೋಷ್ಠಿ ಹಮ್ಮಿಕೊಳ್ಳುವುದು. ಇದರಿಂದ ವಿದ್ಯಾರ್ಥಿಗಳಲ್ಲಿ ಆಲಿಸುವ ಕೌಶಲ ಮೂಡುವುದರೊಂದಿಗೆ ಹೇಗೆ ಭಾಷಣ ಮಾಡಬಹುದೆಂಬ ಸ್ಪಷ್ಟತೆ ಸಿಗುತ್ತದೆ.

ಸ್ವಂತ ಕತೆ ಕವನ ರಚನೆ - ವಿದ್ಯಾರ್ಥಿಗಳೇ ಸ್ವಂತ ಕತೆ ಕವನ ಲೇಖನಗಳನ್ನು ರಚಿಸಲು ಪೂರಕ ವ್ಯವಸ್ಥೆ ಮಾಡಿಕೊಡುವುದು. ಇದಕ್ಕಾಗಿ ಶಾಲಾ ಪತ್ರಿಕೆಗಳನ್ನು ಹೊರತರಬಹುದು. ಅಥವಾ ಶಾಲಾ ನೋಟಿಸ್ ಬೋರ್ಡ್ ನಲ್ಲಿ ಅವರು ಬರೆದ ಲೇಖನ ಕವನಗಳನ್ನು ಪ್ರದರ್ಶಿಸಲು ಅವಕಾಶ ಮಾಡಿಕೊಡಬಹುದಾಗಿದೆ. ಇತ್ಯಾದಿ...

ಹೀಗೆ ವಿದ್ಯಾರ್ಥಿಗಳಲ್ಲಿ ಸುಪ್ತವಾಗಿರುವ ಸಾಹಿತ್ಯ ಅಭಿರುಚಿ ಆಸಕ್ತಿಯನ್ನು ಬೆಳೆಸುವಲ್ಲಿ ಭಾಷಾ ಸಂಘಗಳ ಕಾರ್ಯಚಟುವಟಿಕೆಗಳು ಅತ್ಯಂತ ಪ್ರಮುಖ ಪಾತ್ರ ವಹಿಸುತ್ತಿದ್ದು, ಯಾವ ಶಾಲೆಯಲ್ಲಿ ಭಾಷಾ ಸಂಘ ಸಕ್ರಿಯವಾಗಿರುತ್ತದೋ ಅಂತಹ ಶಾಲೆಯ ವಿದ್ಯಾರ್ಥಿಗಳು ಭವಿಷ್ಯದ ಸಾಹಿತಿಗಳಾಗುವುದರಲ್ಲಿ ಉತ್ತಮ ವ್ಯಕ್ತಿಗಳಾಗಿ ರೂಪುಗೊಳ್ಳುವುದರಲ್ಲಿ ಯಾವುದೇ ಅನುಮಾನವಿಲ್ಲ.

**********************************************************************************